CC-O. In Public Domain. Digitized by eGangotri

ಹೊಸ ರೂಪದ 'ಹಿತೋಪದೇಶ'

ಕೊಲೆಗಾರನ ಕೊಲೆ

(ಮಕ್ಕಳ ನಾಟಕ)

ಕೆ. ಎಸ್. ರಂಗಪ್ಪ

ಗೀತಾ ಬುಕ್ ಹೌಸ್ : ಪ್ರಕಾಶಕರು : ಮೈಸೂರು

Sri Vidyabharathi Book Centre, Sringeri

CC-O. In Public Domain. Digitized by eGangotri

ಎಳೆಯ ವಯಸ್ಸಿನಲ್ಲಿ ತಿಳಿಮನಸ್ಸಿನ ಮೇಲೆ ಇಟ್ಟ ಅಚ್ಚು ಜೀವಾವಧಿ ತನ್ನ ಪ್ರಭಾವವನ್ನು ಬೀರುತ್ತದೆ ಎಂಬುದು ಸರ್ವರೂ ಆಡುವ ಮಾತು. ಆದರೆ ಈ ಸೂತ್ರವನ್ನು ಅರ್ಥವತ್ತಾಗಿ ಅನುಸರಿಸುವವರು ಎಷ್ಟು ವಿರಳ! ಇವರಲ್ಲಿ ಗಾಢನಂಬಿಕೆ ಇಟ್ಟು ಮಕ್ಕಳಿಗೆ ವಿದ್ಯೆ ಬುದ್ಧಿ ಕಲಿಸುವುದೂ, ತಾವು (ಹಿರಿಯರು) ಮಕ್ಕಳೆದುರು ಆದರ್ಶ ಜೀವನದಲ್ಲಿ ತೊಡಗುವುದೂ ಬರಬರುತ್ತಾ ಕಡಿಮೆ ಹಾಗೂ ಕಷ್ಟಸಾಧ್ಯವಾದ ಸಾಹಸವಾಗುತ್ತಾ ಬರುತ್ತಿದೆ.

ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವ ಅನೇಕ ಅಂಶಗಳಲ್ಲಿ, ಅವರು ಸದಾ ನೋಡಿ, ತಿಳಿದು (ಹೆಚ್ಚಾಗಿ ತಿಳಿಯದೆಯೇ), ಹೀರಿ, ಜೀರ್ಣಿಸಿಕೊಳ್ಳುತ್ತಿರುವ ತಮ್ಮ ಸುತ್ತಲಿನ ನಡೆನುಡಿಗಳು ಮುಂದೆ ಅವರ ಜೀವನದಲ್ಲಿ ಪರಿಣಾಮಕಾರಿಯಾಗಿ ಆರಳುತ್ತವೆ ಎಂಬುದು ಸ್ವತಸ್ಸಿದ್ಧವಾದರೆ, ಮಕ್ಕಳು ಆಸಕ್ತಿಯಿಂದ ಕೇಳಿ ಅಥವಾ ಸ್ವಂತವಾಗಿ ಓದಿಕೊಂಡು ಮೆಲುಕು ಹಾಕುವ ಸಾಹಿತ್ಯ-ಸಾಮಗ್ರಿಗಳ ಪ್ರಭಾವ ಅವರ ಮೇಲೆ ಹತ್ತರಷ್ಟು ಎನ್ನುವುದರ ಅರಿವು ಸಾಮಾನ್ಯರಿಗೆ ಸಾಕಷ್ಟಿಲ್ಲ. ಇದನ್ನು ಮನಗಂಡು ದೃಢವಾಗಿ ನಂಬಿದ್ದ ಮೇಧಾವಿ ವಿಷ್ಣುಶರ್ಮ ಜನಸ್ವಭಾವ, ಲೋಕರೀತಿ, ಧರ್ಮಾ-ಧರ್ಮ ವಿವೇಚನೆ, ನೀತಿಮಾರ್ಗ, ಸುಚರಿತೆಗಳನ್ನು ಕೂಡಿಸಿ ತನ್ನ 'ಹಿತೋಪದೇಶ'ದಲ್ಲಿ ರಸವತ್ತಾದ ಭಟ್ಟಿ ಇಳಿಸಿದ್ದಾನೆ. ಆದ್ದರಿಂದ ಕಾಲಾನುಕಾಲದಿಂದ ಈ ಕೃತಿ ಜನಾನುರಾಗ ಪಡೆದಿರುವುದು ಆಶ್ಚರ್ಯವೇನೂ ಅಲ್ಲ. 'ಹಿತೋಪದೇಶ' ಹುಟ್ಟಿದಂದಿನಿಂದ ಹಲವಾರು ಭಾಷೆಗಳಲ್ಲಿ ನೂರಾರು ಭಾಷಾಂತರಗಳು ವಿವಿಧ ವೇಷಗಳನ್ನು ತೊಟ್ಟು ಅನೇಕ ಕಥಾಸರಣಿಗಳು ಹೊರಬಂದಿವೆ. ಆದ್ದರಿಂದ ಮತ್ತೊಂದು 'ಹೊಸ ರೂಪದ ಹಿತೋಪದೇಶ' ಈಗ ಪ್ರವೇಶಿಸುವ ಅವಶ್ಯಕತೆಯೇನು ಎಂಬುದು ಸಾಧುವಾದ ಪ್ರಶ್ನೆ.

ಮುಖ್ಯ ಕಾರಣಗಳನ್ನು ಮಾತ್ರ ಇಲ್ಲಿ ವಿವರಿಸುತ್ತೇನೆ. ಇದುವರೆಗೆ ಪ್ರಕಟವಾಗಿರುವ ಕೃತಿಗಳೆಲ್ಲೆಲ್ಲಾ ಮಾನವಸ್ವಭಾವ, ನ್ಯಾಯಾನ್ಯಾಯ ವಿವೇಚನೆ, ಸುಗಮ ಜೀವನಕ್ಕೆ ಸಹಾಯಕರವಾದ ಚಾತುರ್ಯಗಳನ್ನು ಚಿತ್ರಿಸುವ ಪ್ರಯತ್ನಗಳು ಮಾತ್ರ ನಡೆದಿವೆ. ಆದರೆ 'ಹಿತೋಪದೇಶ'ವು ನಮ್ಮ ಈಗಿನ ಬರಹಗಾರರ ಮುಂದಿಟ್ಟಿರುವ ಅಮೂಲ್ಯ ಅವಕಾಶವನ್ನು ಕಥೆಗಾರರಾಗಲಿ, ಬೋಧಕರಾಗಲಿ ಸದುಪಯೋಗಪಡಿಸಿಕೊಳ್ಳದಿರುವುದು ಆತ್ಯಾಶ್ಚರ್ಯ!

[ಹೊದಿಕೆಯ ಪುಟ ಮೂರರಲ್ಲಿ ಮುಂದುವರಿದಿದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಲೆಗಾರನ ಕೊಲೆ

(ಮಕ್ಕಳ ನಾಟಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ಇದೇ ಲೇಖಕರ ಇತರ ಕೃತಿಗಳು

ಕನ್ನಡ

ಶಿಶು ಶಿಕ್ಷಣ ಮಾರ್ಗದರ್ಶಿ ಮಾಂಟೆಸೋರಿ†
ಹಾಸಿಗೆಯೇ ಹಾವಾಯಿತಲ್ಲಾ !°*
ತಿಪ್ಪೆಮೇಲೆ ಕೋಗಿಲೆ°
ಕರ್ಣ
ಅಶ್ವತ್ಥಾಮ
ಹೊಸರೂಪದ 'ಹಿತೋಪದೇಶ'ದ

English

PLAYS

GANDHIJI'S SADHANA°**
THEY LIVE AGAIN††
THE WILD FLOWER
THE GOATS°
LIGHT FROM THE CROSS°
KARNA
ASHWATHAMA
MENAKA
SHADOW OF FREEDOM
MY LAND ! MY RELIGION !
CHILDENS LITERATURE
MORE TALES FROM THE PANCHATANTRA**
MURDER OF THE MURDERER
THE FAKE SAINT

° ರಂಗದ ಮೇಲೆ ಅಭಿನಯಿಸಲ್ಪಟ್ಟಿದೆ (Produced on the stage)
† ರಾಷ್ಟ್ರೋತ್ಥಾನ ಸಾಹಿತ್ಯ ಪ್ರಕಟಣೆ
* ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆ
** Published by Macmillans
†† Published by ENACT

Sri Vidyabharathi Book Centre, Sringeri

CC-O. In Public Domain. Digitized by eGangotri
ಹೊಸರೂಪದ 'ಹಿತೋಪದೇಶ'

ಕೊಲೆಗಾರನ ಕೊಲೆ

('ಹಿತೋಪದೇಶ'ದ ಒಂದು ಕಥೆಯ ನಾಟಕ ರೂಪ)

ಕೆ. ಎಸ್. ರಂಗಪ್ಪ

ಗೀತಾ ಬುಕ್ ಹೌಸ್ : ಪ್ರಕಾಶಕರು : ಮೈಸೂರು
Sri Vidyabharathi Book Centre, Sringeri

CC-O. In Public Domain. Digitized by eGangotri

KOLEGĀRANA KOLE (*A Play*)—An Adaptation of a *Hitōpadēśa* Story to the Stage by K. S. RANGAPPA. Published by GEETHA BOOK HOUSE, K. R. Circle, Mysore 570 001, 1983.

ಪ್ರಥಮ ಮುದ್ರಣ 1983
ಕಾಪಿರೈಟ್ © ಕೆ. ಎಸ್. ರಂಗಪ್ಪ

NOTE: All rights, including those of translation, broadcasting, staging and screening, and public reading of this work are fully protected according to the International Copyright Convention. Written permission must be obtained from the author for the use of this work in any manner, except for bona fide criticism or review.

ಮುದ್ರಕರು
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು 570 004
Sri Vidyabharathi Book Centre, Sringeri

CC-O. In Public Domain. Digitized by eGangotri

ಪಾತ್ರಗಳು

ಕಾಳ	....	ಗಂಡು ಕಾಗೆ
ಕರಿಯ	....	ಪಕ್ಕದ ಗೂಡಿನ ಕಾಗೆ
ವಿಷದಂತ	....	ನಾಗರಹಾವು
ಕಾಳಿ	....	ಕಾಳನ ಹೆಂಡತಿ
ಕುಟುಕ	....	ಮರಕುಟುಕ
ಜಂಬು	....	ನರಿ, ಕಾಗೆಗಳ ಮಿತ್ರ

ರಾಣಿ

ಸೇವಕಿ

ಸಿಪಾಯಿಗಳು

ಕಾಲ ಮತ್ತು ಸನ್ನಿವೇಶ

ದೃಶ್ಯ ಒಂದು : ನದಿಯ ತೀರದ ಮರದ ಮೇಲೆ ಕಾಗೆಯ ಗೂಡು—ಬೆಳಗಿನ ಹೊತ್ತು

ದೃಶ್ಯ ಎರಡು : ಅದೇ ಸ್ಥಳ—ಮಾರನೆಯ ದಿನ

ದೃಶ್ಯ ಮೂರು : ಅದೇ ಸ್ಥಳ—ಕೆಲವು ದಿನಗಳನಂತರ ; ಸೂರ್ಯೋದಯದ ಸಮಯ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ದೃಶ್ಯ ಒಂದು

(ಒಂದು ನದಿಯ ತೀರದಲ್ಲಿ ಕಾಳ, ಕಾಳಿ ಎಂಬ ಕಾಗೆ ದಂಪತಿಗಳು ತಮ್ಮ ಗೂಡನ್ನು ಒಂದು ಮರದ ಮೇಲೆ ಕಟ್ಟಿಕೊಂಡಿವೆ. ಹತ್ತಿರದಲ್ಲಿಯೇ ಇರುವ ಒಂದು ದೊಡ್ಡ ಹುತ್ತದಲ್ಲಿ ವಿಷದಂತ ಎಂಬ ನಾಗರಹಾವು ಮನೆಮಾಡಿಕೊಂಡಿದೆ. ಈಗ ಕಾಳ ಖುಶಿಯಿಂದ ಹಾಡಿಕೊಂಡು ಗೂಡಿನ ಸುತ್ತಲೂ ಕುಣಿಯುತ್ತಿದೆ.)

ಕಾಳ : ಆರಿವೆ ಎನ್ನಾ ಮೊಟ್ಟೆಗಳು,
ಮರಿಗಳು ಎನ್ನವು ಆರಾಗುವುವು !
ಕರಿ ಮರಿಗಳು ಎಲ್ಲ
ಕರೆವುವು ಎನ್ನನು "ಅಪ್ಪಾ", "ಅಪ್ಪಾ" !
ಲಲ ಲಲಾ ; ಲಲ ಲಲಾ !
ಲಲ ಲಲಾ ; ಲಲ ಲಲಾ !

ಬಣ್ಣ ಬಣ್ಣದಾ ಮೊಟ್ಟೆಗಳೆಲ್ಲ
ಥಳಥಳ ಕಪ್ಪಗೆ ಹೊಳೆಯುವುವು !
ಚಿಲಿಪಿಲಿಗುಟ್ಟುವ ಮರಿಯಾಗಿ,
ಬಿಳಿಯಾ ಮೀರಿಸಿ ಚೆಲುವಾಗಿ !
ಲಲ ಲಲಾ ; ಲಲ ಲಲಾ !
ಲಲ ಲಲಾ ; ಲಲ ಲಲಾ !

(ಒಂದು ಕಡೆಗೆ ಹೋಗಿ ಕೂಗುತ್ತದೆ.) ಕಾ, ಕಾ ; ಕರಿಯೊ; ಹೋ, ಕರಿಯೊ, ಹಾರಿ ಬಾ ಇಲ್ಲಿ, ನನ್ನ ಗೂಡಿಗೆ ಬಾ.

(ಹೊರಗಿನಿಂದ ಧ್ವನಿ)

ಏನು, ಕಾಳಾ ? ಯಾಕೆ ?

ಕಾಳ : ಬಾ, ಬಂದು ನೋಡು ! ಎಷ್ಟು ಮೊಟ್ಟೆ ಇವೆ ನಮ್ಮದು!

ಧ್ವನಿ : ಬಂದೆ, ಬಂದೆ.

(ಇಷ್ಟರಲ್ಲಿ ಕಾಳ ಆ ಕಡೆ ತಿರುಗಿರುವಾಗ, ವಿಷದಂತ, ಸದ್ದು ಮಾಡದೆ ಇನ್ನೊಂದು ಕಡೆಯಿಂದ ಹರಿದುಕೊಂಡು ಒಳಗೆ ಬರುವುದು.)

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷದಂತ : (ಮೂಗಿನಿಂದ ಉಸಿರು ಎಳೆದುಕೊಂಡು ವಾಸನೆ ಹಿಡಿಯುತ್ತ) ಒಳ್ಳೆ ಮೊಟ್ಟೆ ವಾಸನೆ ! ಆಗೋ, ಅಲ್ಲಿ ಗೂಡಿನಿಂದ ಬರ್ತಾ ಇದೆ ! (ಮೊಟ್ಟೆಕುಕ್ಕೆಯ ಕಡೆ ಹರಿದುಬರುತ್ತಿರುವಾಗ, ಕಾಳ ಆ ಕಡೆಯಿಂದ ಹಿಂದಿರುಗಿ ಒಳಕ್ಕೆ ಬಂದುಬಿಡುವುದು ! ತಕ್ಷಣ ಹಾವು ಒಂದು ಕೊಂಬೆಯ ಮೇಲೆ ಉಸಿರಾಡದಂತೆ ಮಲಗಿಬಿಡುವುದು. ಕೊಂಬೆಯ ಹಾಗೆಯೇ ಕಾಣಿಸುವ ವಿಷದಂತ, ಕಾಳನ ಕಣ್ಣಿಗೆ ಬೀಳುವುದಿಲ್ಲ.)

ಕರಿಯ : (ಪ್ರವೇಶಿಸುತ್ತ) ನಮ್ಮ ಮೊಟ್ಟೆಗಳನ್ನು ಬೆಚ್ಚಗೆ ಮಾಡಿ ಮರಿ ಮಾಡ್ತಿದೀನಿ, ಕಾಳ ; ನಾ ಹೋಗಬೇಕು.

ಕಾಳ : (ಮೊಟ್ಟೆಕುಕ್ಕೆಯ ಕಡೆ ಕರೆದುಕೊಂಡು ಹೋಗುತ್ತ) ಬಾ, ಒಂದೇ ಒಂದು ಚಿಟಿಕೆ ನಿಮಿಷ ಬಾ. ಎರಡು ಸಲ "ಕಾ ಕಾ" ಅನ್ನೋಷ್ಟು ಹೊತ್ತು ಅಷ್ಟೆ. (ಬುಟ್ಟಿಯೊಳಗೆ ಕೊಕ್ಕು ಚಾಚಿ ತೋರಿಸುತ್ತಾ) ನೋಡು, ಲೆಕ್ಕ ಮಾಡು ; ಎಷ್ಟು ಮೊಟ್ಟೆಗಳಿವೆ, ನೋಡು ನೀನೇ !

ಕರಿಯ : ನಮ್ಮದೂ ತುಂಬ ಇವೆ.

ಕಾಳ : ತುಂಬ ಎಂದರೆ ಎಷ್ಟು ?

ಕರಿಯ : ಹೇಗೆ ಹೇಳಲಿ ? ನಂಗೇನು ಎಣಿಸೋಕ್ಕೆ ಬರುತ್ತೇ ನಿನ್ನ ಹಾಗೆ ?

ಕಾಳ : ಎಣಿಸೋದೇನು ಕಷ್ಟ ? (ಕುಕ್ಕೆ ಒಳಗೆ ಕೊಕ್ಕಿನಿಂದ ಒಂದು ಮೊಟ್ಟೆ ಮುಟ್ಟಿ) ಒಂದು ಮೊಟ್ಟೆ ಅಲ್ಲಿ, (ಕೆಳಗೆ ಕಾಲಿನ ಬೆರಳೊಂದನ್ನು ಕೊಕ್ಕಿನಿಂದ ಮುಟ್ಟಿ) ಒಂದು ಬೆರಳಿಲ್ಲಿ ; (ಹಾಗೇ ಮತ್ತೆ ಮತ್ತೆ ತೋರಿಸಿ ಲೆಕ್ಕಹಾಕುತ್ತ) ಎರಡು ಮೊಟ್ಟೆ ಅಲ್ಲಿ, ಎರಡು ಬೆರಳಿಲ್ಲಿ ; ಮೂರಲ್ಲಿ, ಮೂರಿಲ್ಲಿ. (ಇನ್ನೊಂದು ಕಾಲು ಮುಂದಿಟ್ಟು) ಹಾಗೇ ಎರಡನೆ ಕಾಲಿನ ಬೆರಳುಗಳನ್ನು ಎಣಿಸೋದು. ನಾಲ್ಕು ಅಲ್ಲಿ, ನಾಲ್ಕು ಇಲ್ಲಿ ; ಐದು ಅಲ್ಲಿ, ಐದು ಇಲ್ಲಿ ; ಆರು ಅಲ್ಲಿ, ಆರು ಇಲ್ಲಿ. ಆರು ಬೆರಳಿಗೆ ಆರು ಮೊಟ್ಟೆ, ನೋಡಿದೆಯಾ !

ಕರಿಯ : ಮತ್ತೆ, ಹಿಂದಿನ ಬೆರಳಿಗೆ ? ಆವುಗಳಿಗಿಲ್ವಾ ಮೊಟ್ಟೆ ?

ಕಾಳ : (ಉದಾಸೀನದಿಂದ) ಈಗಿಲ್ಲ. ಮುಂದಿನ ಸಲ ಅವುಗಳಿಗೂ ಆಗ ಬಹುದು. ನನ್ನ ಹೆಣ್ಣೆಯೋಳು ತುಂಬಾ ಜೋರು. ನಿಂಗೆ ಗೊತ್ತಿಲ್ಲ. (ಆಚೆ ಹಾರಿಹೋಗುತ್ತ) ಬಾ. ನಿನ್ನ ಮೊಟ್ಟೆ ಎಷ್ಟಿವೆ ಎಣಿಸೋಣ.

ಕರಿಯ : (ಕಾಳನನ್ನು ಹಿಂಬಾಲಿಸುತ್ತ) ಹೂಂ, ಬಾ, ಎಣಿಸೋಣ. (ಎರಡು ಕಾಗೆಗಳೂ ಮರೆಯಾಗುವುವು.)

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷದಂತ: (ತಕ್ಷಣ ಎದ್ದು ಸರಸರನೆ ಮೊಟ್ಟೆಯ ಬುಟ್ಟಿ ಕಡೆ ಹರಿದುಹೋಗಿ, ಬುಟ್ಟಿ ಒಳಗೆ ಆಸೆಯಿಂದ ನೋಡುವುದು. ನಾಲಗೆಯಿಂದ ತುಟಿಗಳನ್ನು ಸವರಿ ಕೊಳ್ಳುತ್ತ) ಆ! ಒಳ್ಳೆ, ಒಳ್ಳೇ ಊಟ! ಆರು ಮೊಟ್ಟೆಗಳ ಸಮಾರಾಧನೆ! (ಖುಶಿಯಿಂದ ಬುಟ್ಟಿಯ ಸುತ್ತಲೂ ತಿರುಗುತ್ತಾ) ಈಗ, ಮೊಟ್ಟೆಮೊದಲು, ದೊಡ್ಡ ಮೊಟ್ಟೆ ನುಂಗಲೋ, ಪುಟ್ಟ ಮೊಟ್ಟೆ ನುಂಗಲೋ? (ನಿಂತು ಯೋಚಿಸುತ್ತ) ಏನು ಮಾಡಲಿ? ಊಟ ಎಲ್ಲಾ ಒಂದೇ ತುತ್ತಾದ್ರೆ, ಒಂದೇ ಸಲ ಫಕ್ಕನೆ ಬಾಯ್ಗಿ ಹಾಕ್ಕೊಂಡ್ಬಿಟ್ರೆ ಊಟ ಮುಗೀತು, ಇನ್ನು ಯೋಚನೇನೇ ಇಲ್ಲ. ಆದ್ರೆ ಇಷ್ಟು ಮುಂದಿರೋವಾಗ? ನಿಜವಾಗಲೂ ಹೆಚ್ಚಿದ್ದಷ್ಟೂ ಹೆಚ್ಚು ಚಿಂತೆ. ಪುಟ್ಟ ಮೊಟ್ಟೇನ ಮುಂಚೆ ನುಂಗಿದರೇ ಒಳ್ಳೇದು ಅನಿಸತ್ತೆ. ಅದು ಗುಳುಕ್ ಅಂತ ಒಳಗೆ ಹೋದಮೇಲೆ, ಅದಕ್ಕಿಂತ ಸ್ವಲ್ಪ ದೊಡ್ಡದು ನನ್ನ ಮೈ ಉದ್ದ ಹೊಟ್ಟೆ ಒಳಕ್ಕೆ ಸುಲಭವಾಗಿ ನುಸುಕೊಂಡು ಹೋಗಬಹುದು. ಅದಾದಮೇಲೆ ಅದಕ್ಕಿಂತ ದೊಡ್ಡದು; ಆಮೇಲೆ ಇನ್ನೂ ಇನ್ನೂ ದೊಡ್ಡದು; ಕೊನೇಗೆ ತುಂಬಾ, ಎಲ್ಲಾದಕ್ಕಿಂತ ತುಂಬಾ, ತುಂಬಾ ದೊಡ್ಡದನ್ನು ನುಂಗಿ ಬಿಡೋದು! ಅದೇ ಸರಿ. ಈಗ, ಮೊದಲನೆಯದು — ಪುಟ್ಟದು. (ಆಸೆಯಿಂದ ಚಿಕ್ಕದನ್ನು ಕಚ್ಚಿ ತೆಗೆದು, ಬುಟ್ಟಿಯ ಹಿಂದಕ್ಕೆ ತಿನ್ನಲು ಹೋಗುವುದು. ಆ ಸಮಯಕ್ಕೆ ಸರಿಯಾಗಿ ಕಾಳ ಹಾಡಿಕೊಂಡು ಬರುವುದನ್ನು ಕೇಳಿ, ಅವಸರದಿಂದ ನುಂಗುತ್ತ, ಅದು ಗಂಟಲಲ್ಲಿ ಸಿಕ್ಕಿಕೊಂಡರೂ, ಅವಸರದಿಂದ ಸರಸರನೆ ವಿಷದಂತ ಆಚೆ ಹೋಗಿಬಿಡುತ್ತದೆ.)

ಕಾಳ: (ಹಾಡುತ್ತ, ಕುಣಿಯುತ್ತ, ಬುಟ್ಟಿಯ ಸುತ್ತಲೂ ಕುಪ್ಪಳಿಸುತ್ತ ಹೋಗುವುದು.)

ಲಲ ಲಲಾ ; ಲಲ ಲಲಾ !
ನೆರೆಯಾ ಗೂಡಿನ ಕರಿಯಣ್ಣಾ
ನಾಲ್ಕೇ ಮೊಟ್ಟೆಗಳಪ್ಪಣ್ಣಾ ;
ನೋಡಲಿ ಎನ್ನಾ ಸಂಪತ್ತಾ
ತುಂಬಿದ ಕಣ್ಣಲಿ ನೆರೆಯೆಲ್ಲಾ !
ಲಲ ಲಲಾ ; ಲಲ ಲಲಾ !
ಲಲ ಲಲಾ ; ಲಲ ಲಲಾ !

CC-O. Vidyabharathi Book Centre, Sringeri

CC-O. In Public Domain. Digitized by eGangotri

ಮರಿಗಳು ನನ್ನವು ಬಲು ಕಪ್ಪ್ಪಾ
ಮೀರಿಸಿ ಎಲ್ಲಾ ಹಕ್ಕಿಗಳಾ ;
ಕಂದೋ, ಕೆಂಪೋ, ಮಿಕ್ಕೋರೂ
ಮಂಕೇ ಮುಂಕೂ ಕಪ್ಪೊಡನೆ !
ಲಲ ಲಲಾ ; ಲಲ ಲಲಾ !
ಲಲ ಲಲಾ ; ಲಲ ಲಲಾ !

(ಕಾಳ ಹೀಗೆ ಕುಣಿದಾಡುತ್ತಿರುವಾಗ, ಮೊಟ್ಟೆಗಳ ತಾಯಿ, ಕಾಳಿ, ಕೊಕ್ಕಿನಲ್ಲಿ ಒಂದು ಚೂರು ತಿಂಡಿಯನ್ನು ಕಚ್ಚಿಕೊಂಡು ಹಾರಿ ಒಳಗೆ ಬರುತ್ತದೆ. ಗಂಡ ಹೀಗೆ ಕುಣಿದಾಡುತ್ತಿರುವುದನ್ನು ಕಂಡು, ಥಟ್ಟನೆ ತಿಂಡಿಯನ್ನು ಕೆಳಗೆ ಹಾಕಿ ಆಬ್ಬರಿಸುತ್ತದೆ.)

ಕಾಳಿ : ಆಹಾ, ನಾನು ಮನೇಲಿ ಇಲ್ಲದಾಗ ಹೀಗೇನೋ ಗೂಡನ್ನ ಕಾಯೋದು ? (ಕಾಳ ಮಿಂಚು ಹೊಡೆದಂತೆ ತಲೆ ಬಗ್ಗಿಸಿ ನಿಂತುಬಿಡುವುದು.) ಚೆನ್ನಾಗಿದೆ ! ನೀನು ಕುಣಿದಾಡೋದನ್ನ ನೋಡಿದ್ರೆ, ಮೊಟ್ಟೆ ಹಾಕಿರೋನು ನೀನೇನೆ ಅಂತ ಯಾರಾದರೂ ಅಂದುಕೋಬೇಕು. ಈ ಮನೇಲಿ ಎಲ್ಲಾದಕ್ಕೂ ನಾನೇ ಹೊಣೆ—ನಾನು ಗೂಡು ಕಟ್ಟಬೇಕು, ನಾನು ಕೂಳು ತಂದು ಹಾಕಬೇಕು, ಜೊತೆಗೆ ಮೊಟ್ಟೇನೂ ನಾನೇ ಇಡಬೇಕು. ಕೊನೆಗೆ ಎಲ್ಲಾದಕ್ಕೂ ನಿನಗೆ ಹೆಸರು. ನೀನು ಜಂಭ ಕೊಚ್ಚಿಕೊ—'ಮನೆ ಯಜಮಾನ ನಾನು' ಅಂತ. ಹೋಗಲಿ, ನಿನ್ನ ಕೂಳಾದರೂ ತಂದಿದೀಯೋ, ಅದೂ ಇಲ್ಲವೋ ?

ಕಾಳ : (ನಡುಕದ ಧ್ವನಿಯಲ್ಲಿ) ಇಲ್ಲ, ಕಾಳಿ.

ಕಾಳಿ : (ಗದರಿಸುತ್ತ) ಇಲ್ಲ ! ಏನು ಮಾಡ್ತಿದ್ದೆ ಇಷ್ಟು ಹೊತ್ತು, ನಾನು ಹೊರಗೆ ಹೋಗಿದ್ದಾಗ ? ಅದೂ ನಾನೆಷ್ಟು ಹೊತ್ತು ಹೋಗಿದ್ದೆ ! ಅಲ್ಲಿ ಕೋಗಿಲೆ ಕಣ್ಣೀರು ಹಾಕ್ತಾ ಕೂತುಕೊಂಡುಬಿಟ್ಟಳು.

ಕಾಳ : ಓ ? ಯಾಕೆ ? ಅವಳಿಗೇನಾಯ್ತು ?

ಕಾಳಿ : ಅವಳಿಗೇನೂ ಆಗಿಲ್ಲ : ಅವಳ ಗಂಡ ಇನ್ನೊಬ್ಬ ಕೂಳುದಂಡ. ತತ್ತೀನೆಲ್ಲಾ ಅವಳ ಮುಂದೆ ಹಾಕಿ ಎಲ್ಲೋ ಹಾರಿಹೋಗಿದಾನೆ.

ಕಾಳ : ಪಾಪ !

ಕಾಳಿ : (ಕೋಪದಿಂದ) ಯಾಕೆ ಪಾಪ ? ಬೇರೆ ಕೆಲ್ಸ ಕೊಡರೆ ನಿನಗೆ ತುಂಬ ಮರುಕ ಅಲ್ಲವೇ ?

Sri Vidyabharathi Book Centre, Shringeri

CC-O. In Public Domain. Digitized by eGangotri

ಕಾಳ : (ಮೆಲ್ಲಗೆ) ಅವಳ ಗಂಡ ಇಲ್ಲವಲ್ಲ, ಮೊಟ್ಟೆಗಳನ್ನು ಮರಿಮಾಡೋಕ್ಕೆ ಅಂದೆ ಅಷ್ಟೆ.

ಕಾಳಿ : ಸಾಕು ಸಾಕು ನಿನ್ನ ಕರುಣೆ. ಅವಳ ಮೊಟ್ಟೆ ಅವಳು ಮರಿ ಮಾಡಿ ಕೊಳ್ಳಲಿ ; ಅವಳಿಗೆ ಮರಿ ಮಾಡಿಕೋಳಕ್ಕೆ ಬರತ್ತೆ—ನಿನ್ನ ಸೇವೆ ಏನೂ ಬೇಕಿಲ್ಲ ಅವಳಿಗೆ. ಅವಳು ಬಂದು ಬೇಡಿಕೊಂಡಳು ಅಂತ ಅವಳ ತಪ್ಪಿ ಏನಾದರೂ ಇಟ್ಟುಕೊಂಡೀಯೆ, ಜೋಕೆ !

ಕಾಳ : (ಭಯದಿಂದ) ಇಲ್ಲ, ಕಾಳಿ, ಇಟ್ಟುಕೋಳೋಲ್ಲ.

ಕಾಳಿ : ಹಾಗಂತಿರತೀಯೆ. ಅವಳು ಬಂದು, ಇಂಪಾಗಿ, "ನೀನೇ ಲೋಕ ದಲ್ಲೆಲ್ಲಾ ಚೆಲುವಾ ; ಗರುಡನೂ ನಿನಗೆ ಸಮಾನ ಅಲ್ಲಾ," ಅಂತ ಹಾಡಿ ಬಿಟ್ರೆ, ಬಿಸಿನೀರಲ್ಲಿಟ್ಟ ಬೆಣ್ಣೆ ಹಾಗೆ ಕರಗಿಬಿಡ್ತೀಯಾ ! "ಬಾಮ್ಮಾ, ನಿನ್ನ ಮೊಟ್ಟೆಗಳನ್ನೂ ತೆಗೆದುಕೊಂಡು ಬಾ," ಅಂತ ಅವಳನ್ನೇ ಬೇಡಿಕೋತೀಯಾ. ಇಲ್ಲದಿದ್ದರೆ ನೀನು ತಲೆ ಸೊಟ್ಟಮಾಡಿಕೊಂಡು ಎಲ್ಲೋ ನೋಡುತಿರೋವಾಗ ಅವಳು ಕದ್ದುಬಂದು ನಮ್ಮ ಮೊಟ್ಟೆ ಜೊತೆಯಲ್ಲಿ ಅವಳದ್ದನ್ನೂ ತೂರಿಸಿಬಿಟ್ಟು ಹಾರಿ ಹೊರಟುಹೋಗುತಾಳೆ ಅಷ್ಟೆ.

ಕಾಳ: ಕೋಗಿಲೆ ಕದ್ದು ಇಡೋಕಾಗಲ್ಲ, ಕಾಳಿ : ನಾನು ಆ ಕಡೆ ನೋಡ್ತಾ ಇರೋವಾಗ, ನಿಜವಾಗಲೂ ಈ ಕಡೆ ನೋಡ್ತಾ ಇರ್ತೀನಿ.

ಕಾಳಿ : ಈ ಕಡೆ ನೋಡ್ತಿರೋವಾಗ ?

ಕಾಳ: ಆ ಕಡೆ ನೋಡ್ತಿರ್ತೀನಿ.

ಕಾಳಿ : ಸಾಕು, ನಿನ್ನ 'ಈ ಕಡೆ, ಆ ಕಡೆ' !

ಕಾಳ: ಹಾಗಾದರೆ, ಅವಳು ಕದ್ದು ಇಟ್ಟುಬಿಟ್ಟು ಹೋದರೆ, ಯಾವುದು ಕೋಗಿಲೇದೂ ಯಾವುದು ನಮ್ಮದೂ ಅಂತ ನೀ ಹೇಳು...

ಕಾಳಿ : ಹೇಗೆ ಹೇಳಲಿ, ಇಟ್ಟು ಹಾರಿಹೋದಮೇಲೆ ? ಕಾಗೆ ಮೊಟ್ಟೆ ಕೋಗಿಲೆ ಮೊಟ್ಟೆ, ಎರಡೂ ಗುಲಗಂಜಿ ಹಾಗೆ ಆವಳಿಜವಳಿ. ಅದೇ ನೀಲಿ-ಹಸಿರು ಬಣ್ಣ, ಅದೇ ಚುಕ್ಕಿಗಳು, ಅದೇ ಗೆರೆಗಳು ! ನೀನು ಹೇಳ್ತೀಯೋ, ಯಾವುದು ಯಾರದ್ದು ಅಂತಾ ?

ಕಾಳ : ನಂಗೆ ಬರಲ್ಲ.

ಕಾಳಿ : ಹೋಗಿ, ನಿನ್ನ ಕೂಳನ್ನಾರೂ ನೀನೇ ಆರಿಸಿಕೊಂಡು ಬರಬಾರದೇ ?

(ಕಾಳ, ಹೆಂಡತಿಯ ಕಾಲಿನ ಪಟ್ಟಿಗಳ ಬಿದ್ದಿರುವ ತಿಂಡಿ ಚೂರಿನ ಮೇಲೆ, ಅರ್ಧ ಆಸೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅರ್ಧ ಭಯದಿಂದ, ಕಣ್ಣುಹಾಕುತ್ತದೆ.) ಆಂ ! (ಕಾಳಿ, ತನ್ನ ತಿಂಡಿಯ ಮೇಲೆ ಬಿಗಿಯಾಗಿ ಕಾಲಿಟ್ಟು) ಇದರ ಮೇಲೆ ಕಣ್ಣುಹಾಕೀಯೆ, ಜೋಕೆ ! ಇದು ಪೊಟ್ಟೆ ಒಡೆದುಕೊಂಡು ಬರೋ ನಮ್ಮ ಮಕ್ಕಳಿಗೆ !

ಕಾಳ : (ಮನಸ್ಸಿಲ್ಲದೆ ಹೊರಡುತ್ತ) ಆಗಲಿ. ಮನೇಲಿ ಅನ್ನದ ರಾಶಿ ಇಟ್ಟುಕೊಂಡು ತಿರುಪೇಗೆ ಹೋಗೋದರಲ್ಲಿ ನನಗೇನೋ ಬುದ್ಧಿವಂತಿಕೆ ಕಾಣಲ್ಲ.

ಕಾಳಿ : (ಖಂಡತವಾಗಿ) ಉಹುಂ ! ನಿನ್ನ ಅನ್ನ ನೀನು ಸಂಪಾದಿಸಿಕೊಂಡು ಬಂದ ಹೊರತು ನಿಂಗೆ ಅನ್ನ ಇಲ್ಲ ; ಸೋಮಾರಿ ! (ಎಚ್ಚರಿಸುತ್ತ) ಯಾವಾಗಲಾದರೂ ನಾನು ತಂದಿದ್ದನ್ನು ನೀನು ಕಸಿಯೋದು ಕಂಡರೆ, ನೋಡ್ತಿರು, ನಿನ್ನ ಕುಕ್ಕಿ, ಗೂಡಿನಿಂದ ಓಡಿಸಿಬಿಡ್ತೀನಿ !

ಕಾಳ : ಕದ್ದು ತಿನ್ನೋತಂಕಲಾದರೂ ಕಾಯಬಾರದೇ ಬಯ್ಯಕ್ಕೆ ?

ಕಾಳಿ : ಊರು ಕೊಳ್ಳಿಹೋದಮೇಲೆ ಹೆಬ್ಬಾಗಿಲು ಹಾಕಿದ ಹಾಗೆ, ಆಗ ಬೈದರೆ ಏನು ಬರತ್ತೆ ? ಹೋಗಿ ತುಂಬಿಕೊಂಡು ಬಾ ನಿನ್ನ ಹೊಟ್ಟೇನ.

ಕಾಳ : ಆಗಲಿ, ಆಗಲಿ. ನಿನ್ನ ಮುದುವೆ ಮಾಡಿಕೊಂಡಿದ್ದಕ್ಕೆ ಇದೇ ನನ್ನ ಗತಿ. ಒಂಟಿಯಾಗಿದ್ದಿದ್ರೆ, ಹೊಟ್ಟೇಗಿಲ್ದೆ ಪೊಟ್ಟೆ ಕಾಯೋದಾದರೂ ತಪ್ಪಿತ್ತು. (ಆಚೆ ಹೋಗುವುದು.)

ಕಾಳಿ : (ಪೊಟ್ಟೆಬುಟ್ಟಿಗೆ ಹೋಗುತ್ತ) ಇಂಥ ಗಂಡುಗಳು ತಾವೇ ಚಿರುಕು ಅಂದುಕೊಂಡಿವೆ. (ಗೂಡೊಳಗೆ ಕಾತುರದಿಂದ ನೋಡುತ್ತ) ಅಯ್ಯೋ ! ದೇವರೇ, ನಮ್ಮಪ್ಪಾ ! ಎಲ್ಲಾ ಇವೆಯೇನಪ್ಪಾ ? ಇಲ್ಲ ! ಇಲ್ಲ ! (ಕೂಗಿಕೊಳ್ಳುತ್ತ) ಕಾಳಾ, ಕಾಳಾ ! ಬಾ ಇಲ್ಲಿ ! ಬೇಗ ಬಾ !

ಕಾಳ : (ಓಡಿ ಒಳಗೆ ಬಂದು) ಏನು, ಕಾಳಿ ! ಏನಾಯ್ತು ?

ಕಾಳಿ : ಐದೇ ಇವೆ ! ಇನ್ನೊಂದೆಲ್ಲಿ ? ಕೊನೇದು, ಪುಟ್ಟದು—ಎಲ್ಲಿ ? !

ಕಾಳ : ನಿಜವಾಗಲೂ ? ಎಲ್ಲಾ ಅಲ್ಲೇ ಇರಬೇಕು !

ಕಾಳಿ : (ಗೋಳಿಡುತ್ತ) ಅಯ್ಯೋ ನನ್ನ ಚಿನ್ನಾ ! ನನ್ನ ಪುಟಾಣೀ !

ಕಾಳ : (ಗಲಿಬಿಲಿಯಿಂದ) ಎಲ್ಲಿ ಹೋಗಬೇಕು ? ಎಲ್ಲಿ ಹೋಯ್ತು ?

ಕಾಳಿ : (ಕೋಪದಿಂದ) ನನ್ನ ಕೇಳಿದ್ದಾನೆ ! ಯಾರ್ಗೋ ಬಂದು ಕದ್ದು ತಿಂದು ಬಿಟ್ಟಿದಾರೆ ! ಅಯ್ಯೋ ದೇವರೇ !

Sri Vidyabharathi Book Centre, Sringeri

 CC-0. In Public Domain. Digitized by eGangotri

ಕಾಳ : ನಾನಿಲ್ಲೇ ಇದ್ದೆ ; ದೇವರಾಣೆ ! ಕಳ್ಳ ಯಾರೂ ಕಾಣಿಸಲಿಲ್ಲ. ರೆಪ್ಪೆ ಮಿಟುಕಿಸದೆ ನೋಡ್ತಾನೇ ಇದ್ದೆ !

ಕಾಳಿ : (ಕೋಪ, ಆಳು ಎರಡೂ ಕೂಡಿ) ನಿನ್ನ ಸೊಟ್ಟ ಕಣ್ಣು, ಕುಣಿಯೋ ಕಾಲುಗಳಿಗೆ ಕಳ್ಳರ ದಂಡು ಬಂದರೂ ಕಾಣಲ್ಲ ! ನಿನ್ನಿಂದಾನೆ ನನ್ನ ಮೊಟ್ಟೆ ಕಳೆದುಹೋಯ್ತು ! ಹೊಟ್ಟೆಹೊರಕ ! ಬೀದಿಬೀದಿ ಅಲೆಯೋ ಸೋಮಾರೀ ! (ಗೂಡಿನ ಸುತ್ತಲೂ ಕಾಳನನ್ನು ಅಟ್ಟಿಸಿಕೊಂಡು ಹೋಗುತ್ತ) ಮರಿಯಾಗಕ್ಕೆ ಮುಂಚೆ ಮೊಟ್ಟೆಗಳನ್ನ ಎಣಿಸಬೇಡಾ ಅಂತ ಎಷ್ಟು ಹೇಳ್ದೆ !

ಕಾಳ : (ಕಾಳಿಯಿಂದ ತಪ್ಪಿಸಿಕೊಳ್ಳುತ್ತ) ಎಣಿಸದಿದ್ರೆ, ಮೊಟ್ಟೆಗಳು ಬಂದಿದ್ದು ಹೋಗಿದ್ದು ಹೇಗೆ ತಿಳಿಯತ್ತೆ ? ನಿಂತು ಯೋಚಿಸು, ಕಾಳಿ !

ಕಾಳಿ : (ಬಿಡದೆ ಅಟ್ಟುತ್ತ) ಊರೆಲ್ಲಾ ಕೇಳೋ ಹಾಗೆ ನಿನ್ನ ಯಾರು ಕೊಚ್ಚಿ ಕೊಂಡು ಕುಣಿ ಅಂದೋರು ? ನೋಡೀಗ, ಏನಾಯ್ತು ? (ಗೋಳಿಡುತ್ತ) ಅಯ್ಯೋ, ಹೀಗೇ ನನ್ನ ಮೊಟ್ಟೆಗಳೆಲ್ಲಾ ಮಾಯವಾಗಿಹೋದರೆ ಏನು ಗತಿ ?

(ಕಾಳಿ ಕಾತುರನಾಗಿ ಸಂದಿಗೊಂದೀಲಿಲ್ಲ ಆ ಕಳ್ಳನನ್ನು ಹುಡುಕುತ್ತಿರುವಾಗ, ಮರಕುಟುಕ ಪ್ರವೇಶಿಸುತ್ತದೆ.)

ಕುಟುಕ : ಏನಾಯ್ತು, ಕಾಳೀ ? ಏಕೆ ಗೋಳಾಡ್ತಿದೀಯೆ ? ಹಾರಿಹೋಗ್ತಿರೋವಾಗ ನಿನ್ನಳು, ಕೂಗಾಟ ಕೇಳಿಸ್ತು ; ಅದೇನು ನೋಡೋಣಾ ಅಂತ ಬಂದೆ.

ಕಾಳ : (ಕುಟುಕನ ಹತ್ತಿರ ಓಡಿಬಂದು) ಕುಟುಕಾ, ನಮ್ಮದೊಂದು ಮೊಟ್ಟೆ ಮಾಯವಾಗಿಬಿಟ್ಟಿದೆ !

ಕಾಳಿ : (ತಲೆ ಎತ್ತಿ, ಅಳುತ್ತ) ಅದೇನೂ ಸಾದಾ ಮೊಟ್ಟೆ ಅಲ್ಲ ; ಒಳ್ಳೆ ಮುದ್ದುಮುದ್ದಾದ ನೀಲಿಬೊಟ್ಟುಗಳಿದ್ದವು ಆ ಪುಟ್ಟ ಮೊಟ್ಟೆ ಮೇಲೆ ! ಇನ್ನಂಥಾ ಮೊಟ್ಟೆ ಎಂದಿಗೂ ಹುಟ್ಟಲ್ಲ !

ಕುಟುಕ : ಆದು ಯಾವಾಗಲೂ ಹಾಗೇ, ಕಾಳಿ : ಕಳೆದುಹೋಗಿದ್ದಕ್ಕೆ ಬೆಲೆ ಹೆಚ್ಚು. (ಬುಟ್ಟಿಯಲ್ಲಿ ನೋಡಿ) ಇನ್ನೂ ಎಷ್ಟು ಇವೆಯಲ್ಲಾ, ಬಿಡು. ಹೆಚ್ಚು ಮಕ್ಕಳಾದರೆ ಹೊಟ್ಟೇಗೆ ಹೊಂದಿಸೋದು ಕಷ್ಟ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಳಿ : (ರೇಗಿ) ನೀವು, ಗಂಡುಗಳು, ಎಲ್ಲಾ ಕಟುಕರು! ಹೆತ್ತವರ ಸಂಕಟ ನಿಮಗೇನು ಗೊತ್ತು! ಹೆಣ್ಣಿಗೆ ಎಷ್ಟು ಮಕ್ಕಳಿದ್ದರೂ ಇನ್ನೂ ಬೇಕು.

(ಗಡುಸಾಗಿ, ಪೊಟ್ಟಿಗಳನ್ನು ಕಾಯಲು ಬುಟ್ಟಿಯ ಪಕ್ಕಕ್ಕೆ ಹೋಗುವುದು.)

ಕಾಳಿ : ಮಿಕ್ಕ ಮೊಟ್ಟೆಗಳದ್ದೇ ಯೋಚನೆ, ಕುಟುಕ. ಹಿಂದಿನ ಸಲಾನೂ ಹೀಗೇ—ಒಂದಾದಮೇಲೆ ಒಂದು ಕಳೆದೇಹೋದವು! ಈ ಸಲಾನೂ ಹಾಗೇ ಆಗಿಬಿಟ್ಟರೆ? ಅದೇ ಭಯ!

(ಕಾಳಿ, ಎದೆ ಕರಗಿಹೋಗುವಂತೆ ಬಿಕ್ಕಿಬಿಕ್ಕಿ ಅಳಲು ಆರಂಭಿಸುವುದು.)

ಕುಟುಕ : ಅಳಬೇಡ, ಕಾಳಿ. ಸ್ವಲ್ಪ ಧೈರ್ಯ ತಂದುಕೋ! ಯಾರಿರ ಬಹುದು ಕಳ್ಳ? ಏನೂ ಸುಳಿವೇ ಇಲ್ಲವೆ ನಿಮಗೆ? ಮೊಟ್ಟೆಗಳಿಗೆ ರೆಕ್ಕೆ ಇಲ್ಲ : ಹಾರಿಹೋಗೋಕ್ಕಾಗಲ್ಲ ಅವಕ್ಕೆ!

ಕಾಳಿ : ಅದು ನಂಗೊತ್ತು, ಅವನ್ಯಾರೋ ಮಹಾ ಮೋಸಗಾರ ಇರ ಬೇಕು. ಸದ್ದೇ ಇಲ್ಲದೆ ಇಲ್ಲೀತನಕ ಬರ್‍ತಾನಲ್ಲಾ! ಕಾಲುಗಳಿಗೆ ಎಲ್ಲೋ ಹತ್ತಿ ಸುತ್ತಿಕೊಂಡು ಬರ್‍ತಿರಬೇಕು ಅವನು!

ಕಾಳಿ : ತನ್ನ ತಪ್ಪನ್ನು ಒಪ್ಪಿಕೊಳ್ಳದೆ, ತಪ್ಪಿಸಿಕೊಳ್ಳಕ್ಕೆ ಉಪಾಯ ಹುಡುಕುತಿದಾನೆ. ಇವನ ತಲೇಲಿ ಹತ್ತಿ ತುಂಬಿದೆ ಅಷ್ಟೆ!

ಕುಟುಕ : ಕಣ್ಣಿಟ್ಟು ಕಾಯ್ತಾ ಇರು, ಕಾಳಿ, ಕಳ್ಳ ಸಿಕ್ಕೊಂಡುಬಿಡ್ತಾನೆ.

ಕಾಳಿ : ಅವನು ಕಾಯ್ತಾ ಇರೋವಾಗ್ಲೇ ನನ್ನ ಪುಟ್ಟ ಮೊಟ್ಟೆ ಮಾಯ ವಾಗಿರೋದು. ಇವನ್ನ ಗೂಡು ಕಾಯಕ್ಕೆ ಬಿಟ್ಟು ನಾನು ಹಾರಿ ಹೋಗುವಾಗ ಎಲ್ಲಾ ತತ್ತಿಗಳೂ ಇದ್ದವು. ಹಿಂತಿರುಗಿ ಬಂದು ನೋಡಿದ್ರೆ, ಮಳೆ ಬರಕ್ಕೆ ಮುಂಚೆ ನವಿಲು ಕುಣಿಯೋ ಹಾಗೆ, ಕೇಕೆ ಹಾಕ್ಕೊಂಡು ಜಾಗರ ಆಡತಾ ಇದಾನೆ! ಗೂಡೊಳಗೆ ನೋಡಿದ್ರೆ ಐದೇ ತತ್ತಿ! ಒಂದು ಕಮ್ಮಿಯಾಗಿದೇ ಅಂತಾನೂ ತಿಳೀದು ಈ ಮಾರಾಯನಿಗೆ!

ಕುಟುಕ : ಹಾಗೇ?

ಕಾಳಿ : (ಮೆಲ್ಲಗೆ) ಹೌದು; ನಾನೇನು ಮಾಡ್ಲಿ?

ಕುಟುಕ : ನಿಜ, ಅವನೇನು ಮಾಡ್ತಾನೆ? ಪಾಪ!

ಕಾಳಿ : (ಕೋಪದಿಂದ) ನೀವು ಗಂಡುಗಳೆಲ್ಲ ಕಳ್ಳರು ಸಂತೆ ಕಟ್ಟಿದಹಾಗೆ! ನಿಮ್ಮನ್ನ ಯಾವಾಗ್ಲೂ ನಂಬಿಕೂಡದು!

Sri Vidyabharathi Book Centre, Sringeri

ಕುಟುಕ : ನೀನೇ ಕಾವಲಿರು, ಕಾಳಿ : ಅದಕ್ಕೆ ಸಮ ಇಲ್ಲ.

ಕಾಳಿ : ಓಹೋ, ಹಾಗೋ ? (ವ್ಯಂಗ್ಯವಾಗಿ) ನಾನೇ ಕಾವಲಿರ್ತೀನಿ, ನಾನೇ ತಿನ್ನೋಕ್ಕೂ ತಂದುಹಾಕತೀನಿ, ನಾನೇ ಮೊಟ್ಟೆ ಮೇಲೆ ಕೂತು ಮರಿ ಮಾಡ್ತೀನಿ. ಅವನೇನು ಮಾಡ್ತಾನೆ ?

ಕುಟುಕ : ಗಂಡನ ಕೆಲಸ. ಆಚೆ ಹೋಗಿ, ಅಲ್ಲಿ ಇಲ್ಲಿ ದುಡಿದು, ಅನ್ನ ಸಂಪಾದಿಸಿಕೊಂಡು ಬರ್ತಾನೆ.

ಕಾಳಿ : ಅಲ್ಲವೆ ಮತ್ತೆ ? ಏನೂ ಬೇಡ. ನಾನೇನು ಕೈಲಾಗದ ಹೆಣ್ಣು ಅಂದು ಕೊಂಡುಬಿಟ್ಟಿಯೋ ? ನನ್ನ ಹೊಟ್ಟೆ ನಾನು ಹೊರಕೋಬಲ್ಲೆ ! (ಶಕಮೆಯಿಂದ ಮೊಟ್ಟೆಗಳ ಕಡೆ ಹೋಗುವುದು.)

ಕಾಳಿ : ನೋಡಿದೆಯಾ ? ಸೋಮಾರೀ ಅಂತ ಬೈತಾಳೆ : ಏನಾರೂ ಮಾಡ್ತೀನಿ ಅಂತ ಹೊರಟರೆ, ಅದಕ್ಕೂ ಉಹುಂ—ಆಡ್ಡ ಬರತಾಳೆ.

ಕುಟುಕ : (ಕಾಳನ ಕಿವಿಯಲ್ಲಿ ಪಿಸುಗುಟ್ಟುತ್ತ) ಆಗ ನಿನ್ನ ಇನ್ನಷ್ಟು ಬೈತಾ ಇರಬಹುದು ಅಂತ, ಕಾಳ. ಹೆಂಡತಿ ಕೈ ನೆಚ್ಚಿಕೊಂಡಷ್ಟೂ ನೀನು ಅವಳ ಗುಲಾಮನಾಗತೀಯಾ. (ಕಾಳಿ ಈ ಕಡೆ ತಿರುಗಿದಾಗ, ಗಟ್ಟಿಯಾಗಿ) ಹೀಗೆ ಮಾಡಿ : ಇನ್ನುಮುಂದೆ ನೀವಿಬ್ಬರೂ ಗೂಡು ಬಿಟ್ಟು ಹೋಗೋವಾಗ ನನ್ನ ಕರೀರಿ ; ನಾನು ಬಂದು ಕಾಯ್ತಾ ಇರ್ತೀನಿ.

ಕಾಳಿ : ಜೋಕೆ ಕುಟುಕ, ನೀನು ಇವನಿಗಿಂತ ಹುಷಾರಾಗಿ ನೋಡಿಕೊಳ್ಳಬೇಕು.

ಕುಟುಕ : ಯೋಚನೆ ಮಾಡಬೇಡ, ಕಾಳಿ : ಹೂತಿರೋ ಹುಳೂನೂ ನನ್ನ ತಪ್ಪಿಸಿಕೊಂಡು ಹೋಗಕ್ಕಾಗಲ್ಲ, ಮೊಟ್ಟೆ ಹೊತ್ತುಕೊಂಡು ಹೋಗೋ ಕಳ್ಳ ನನ್ನ ಕಣ್ಣಿಗೆ ಬೀಳಲ್ವೇ ?

ಕಾಳಿ : (ಬಹು ಕೃತಜ್ಞತೆಯಿಂದ) ನೀನೀಗ ನಂಟ, ಕುಟುಕ—ಕಷ್ಟಕ್ಕಾಗೋನು ! ನಿನ್ನ ಉಪಕಾರ ನಾವೆಂದೂ ಮರೆಯಲ್ಲ.

CC-O. In Public Domain. Digitized by eGangotri

ದೃಶ್ಯ ಎರಡು

(ಮರದ ಮೇಲೆ ಗೂದಿರುವ ಅದೇ ಸ್ಥಳ. ಮರಕುಟುಕ ಚುರುಕಾಗಿ ನೆಲವನ್ನು ಕುಕ್ಕುತ್ತಾ ಹುಳುಗಳನ್ನು ಹುಡುಕಿ ತಿನ್ನುತ್ತಿದೆ. ಹಾಗೂ ಮೊಟ್ಟೆಯ ಕುಕ್ಕೆಯ ಮೇಲೆ ಒಂದು ಕಣ್ಣು ಇಟ್ಟೇ ಇದೆ. ಆಗಾಗ ಹೋಗಿ ಬುಟ್ಟಿಯೊಳಗೆ ನೋಡುತ್ತಿದೆ.)

ಕುಟುಕ : ಎಲ್ಲಾ ಅಲ್ಲಲ್ಲೇ ಇವೆಯಲ್ಲಾ ! ಅಲುಗಾಡಿಲ್ಲ. ಎಷ್ಟು ಹೊತ್ತಿಂದ ಕಾಯ್ತಿದೀನಿ : ಕಳ್ಳಾನೂ ಇಲ್ಲ ಗಿಳ್ಳಾನೂ ಇಲ್ಲ. (ಹಿಂತಿರುಗಿ ಬಂದು ಹುಳು ಹುಡುಕುವುದಕ್ಕೆ ಪುನಃ ಪ್ರಾರಂಭಿಸುತ್ತ) ಕಾಳೀಗೆ ಸುಮಾರು ಲೆಕ್ಕ ಬರೋದಿಲ್ಲಾ ಅಂತ ಕಾಣತ್ತೆ. ತಪ್ಪುತಪ್ಪೇ ಎಣಿಸಿಬಿಟ್ಟು ಇಲ್ಲಾ, ಇಲ್ಲಾ ಅಂತ ಕೂಕ್ಕೋತಾಳೆ. (ಹುತ್ತದಿಂದ ದೂರವಾಗಿ ಕುಟುಕ ಹುಳು ಹುಡುಕಲು ಹೋಗುತ್ತದೆ.)

(ವಿಷದಂತ ಹುತ್ತದಿಂದ ಹೆಡೆಯೆತ್ತಿ ಸುತ್ತಲೂ ನೋಡುವುದು. ಕುಟುಕ ದೂರದಲ್ಲಿ ಬೆನ್ನು ತಿರುಗಿಸಿಕೊಂಡಿರುವುದನ್ನು ನೋಡಿ, ಇದೇ ಸಮಯ ಎಂದು, ಸರಸರನೆ ಬುಟ್ಟಿಯ ಕಡೆ ಹರಿದುಹೋಗುತ್ತದೆ. ಒಣ ಎಲೆ ರಾಶಿಯ ಮೇಲೆ ಹರಿದುಹೋಗುವಾಗ ಪರಪರ ಎಂದು ಶಬ್ದವಾಗುತ್ತದೆ. ಕುಟುಕ ಸಪ್ಪಳ ಬರುತ್ತಿದ್ದ ಕಡೆ ತಿರುಗುವುದು. ಅಷ್ಟರೊಳಗೆ ವಿಷದಂತ ಅಲುಗದೆ ಅಲ್ಲೇ ಮಲಗಿ ಮಾಯವಾಗುವುದು. ಕುಟುಕ ಸುತ್ತಲೂ ನೋಡಿ, ಏನೂ ಕಾಣದೆ, ತನ್ನ ಕೆಲಸಕ್ಕೆ ಹಿಂತಿರುಗುವುದು. ಆದರೆ ಮತ್ತೆ ಮತ್ತೆ ಹೀಗಾದನಂತರ, ಗಲಿಬಿಲಿಯಾಗಿ)

ಕುಟುಕ : (ಆಶ್ಚರ್ಯದಿಂದ) ಇದು ಯಾವುದೋ ಕಳ್ಳ-ಭೂತ ಇರಬೇಕು ! ಇರಲಿ : ಇದನ್ನು ಹಿಡೀಲೇಬೇಕು ! (ಹೋಗಿ ಬುಟ್ಟಿ ಹಿಂದೆ ಆವಿತುಕೊಂಡು ಇಣುಕಿ ಇಣುಕಿ ಎಲ್ಲ ಕಡೆಯೂ ಎಚ್ಚರದಿಂದ ಕಾಯುತ್ತದೆ. ಸ್ವಲ್ಪ ಹೊತ್ತಿನಲ್ಲೇ ವಿಷದಂತ ಮೆಲ್ಲಗೆ ಹೆಡೆ ಎತ್ತಿ ಸುತ್ತಲೂ ನೋಡಿ ಯಾರೂ ಇಲ್ಲದಿರುವುದನ್ನು ಕಂಡು, ಸರಸರನೆ ಬುಟ್ಟಿ ಕಡೆ ಹೊರಡುವುದು. ಹರಿಯುವ ಹಾವು ಕಣ್ಣಿಗೆ ಬಿದ್ದ ಕ್ಷಣ ಕುಟುಕ ಹಾರಿಬರುವುದು.) ಆ ! ನೀನೇ, ವಿಷದಂತಾ ! ನಿಲ್ಲು, ಕಳ್ಳಾ !

(ಹರಿಯುತ್ತಿರುವ ಹಾವಿನ ತಲೆ ಮೇಲೆ ಕುಕ್ಕುವುದು ! ಹಾವು ಬುಸುಗುಟ್ಟುತ್ತ ಹೆಡೆ ಎತ್ತುವುದು. ಕುಟುಕ, ಕುಕ್ಕಲು ಅವಕಾಶ ಹುಡುಕುತ್ತ, ವಿಷದಂತನ ಸುತ್ತಲೂ ಕುಪ್ಪಿ, ಹಾರಿ, ನಗಿಯುತ್ತಿರುವುದು !)

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷದಂತ : ಜೋಕೆ ! ನನ್ನುಸಿರೇ ಸಾಕು, ನಿನ್ನ ಸುಟ್ಟುಹಾಕಕ್ಕೆ ! ನಾ ಕಚ್ಚಿದರೆ ನೀ ಮುಗಿದೆ !

ಕುಟುಕ : ಠಕ್ಕ್ ! ಗೆದ್ದಲುಹುಳು ಕಟ್ಟಿದ ಮನೇನ ಲಪಟಾಯಿಸಿಕೊಂಡು, ಈಗ ಬಡಪಾಯಿ ಕಾಗೆಗಳ ವಂಶ ನುಂಗಿಹಾಕಕ್ಕೆ ಬಂದೆಯಾ ? ನಿನಗೆ ನಾಚಿಕೆ ಆಗಲ್ಲವೆ ? ಹೋಗು, ನಿನ್ನ ಮೊಟ್ಟೆಗಳನ್ನೇ ತಿನ್ನು ಹೋಗು ! ಅಷ್ಟು ಮೊಟ್ಟೆ ಹಾಕುತೀಯಲ್ಲಾ—ಅನ್ಯಾಕಾರನಿಗೆ ಹನ್ನೆರಡು ಗಂಡು ಅನ್ನೋ ಹಾಗೆ !

ವಿಷದಂತ : ತಿಂತೀನಿ. ಆದರೆ ಅವು ಯಾವ ಮೂಲೇಗೆ, ನನ್ನ ಮೈಲಿ ಉದ್ದದ ಹೊಟ್ಟೇಗೆ ?

ಕುಟುಕ : (ಭಯದಿಂದ ಬೆರಗಾಗಿ) ಏನು ! ನಿನ್ನ ತತ್ತಿ ನೀನೇ ತಿಂತೀಯಾ ? ಭಯಂಕರ ! ಭಯಂಕರ ! ತಾನು ಬಿಟ್ಟ ಹಣ್ಣನ್ನು ಗಿಡ ತಾನೇ ನುಂಗತ್ಯೇ ?

ವಿಷದಂತ : (ಕುಟುಕನ ಆಶ್ಚರ್ಯಕ್ಕೆ ಆಶ್ಚರ್ಯಪಡುತ್ತ) ನಿನ್ನ ಮಾತು ಅರ್ಥ ಆಗಲ್ಲ ನಂಗೆ : ನನ್ನ ಮೊಟ್ಟೇನೂ ನಾನು ತಿನ್ನಕೂಡದು, ಮಿಕ್ಕೋರ ಮೊಟ್ಟೇನೂ ನಾನು ತಿನ್ನಕೂಡದು ! ಮತ್ತೆ ಏನು ತಿನ್ನಬೇಕು ?

ಕುಟುಕ : ನಾವು, ಹಕ್ಕಿಗಳೇ ವಾಸಿ : ನಮ್ಮ ಮಕ್ಕಳನ್ನು ನಾವೇ ತಿಂದು ಹಾಕಲ್ಲ !

ವಿಷದಂತ : ಓಹೋ, ನೀವು ಮಾಡದಿರೋದು ನಾನು ಮಾಡ್ತೀನಲ್ಲಾ, ಅದಕ್ಕೆ ನಾನು ನಾಚಿ ತಲೆ ಬಗ್ಗಿಸಿಕೊಂಡು ಹೋಗಬೇಕಲ್ವೇ ?

ಕುಟುಕ : ಮತ್ತೆ ? ಎಲ್ಲರೂ ಇರೋ ಹಾಗೆ ತಾನೂ ಇರಬೇಕು.

ವಿಷದಂತ : ಹಾಗಾರೆ, ನಿನ್ನ ಹಾಗೆ ನಾನೂ ಒಂದು ಕೊಕ್ಕು ಸಿಕ್ಕಿಸಿಕೋಬೇಕು ; ನಿನ್ನ ಹಾಗೇ ಎರಡು ಕಡ್ಡಿ ಕಾಲ ಮೇಲೆ ನಡೀಬೇಕು ; ನೀನು, "ಕುಟ್ ಕುಟಾ, ಹೂಪ್ಪೋ, ಹೂಪ್ಪೋ" ಅಂತ ಕೂಗೋ ಹಾಗೆ ನಾನೂ ಕೂಗು ಹಾಕಬೇಕು ; ಒಳ್ಳೆ ಮರ್ಯಾದಸ್ಥ ಹಾವಿನ ಹಾಗೆ ನಾನು "ಬುಸ್ ಬುಸ್" ಅಂತ ನನ್ನ ಭಾಷೆ ಮಾತಾಡಕೂಡದು. ನನ್ನ ರೀತಿ ನಾನು ನಡಕೊಂಡ್ರೆ ನಾಚಿಕ್ಕೇಡು, ಅಲ್ಲವೇ ? ಹ ಹ ಹಾ ! (ಕೇಕೆ ಹಾಕಿಕೊಂಡು ನಗುವುದು.)

ಕುಟುಕ : ಹೌದು ; ಓಡಿಹೋಗಿ ಎಲ್ಲಾರೂ ಬಿಲದಲ್ಲಿ ನುಸಿದು ತಲೆಮರೆಸಿಕೊಂಡು ಕೂರೋಣ !

CC-O. Vidyabharathi Book Centre, Sringeri

CC-O. In Public Domain. Digitized by eGangotri

ವಿಷದಂತ : (ನಗುತ್ತ) ಬಿಲದಲ್ಲೇ ನನ್ನ ವಾಸ. ಆದರೆ ನಾಚಿಕೆಗೋಸ್ಕರ ಅಲ್ಲ. ನೀನಂದುಕೊಂಡಿರೋದು, ಎಲ್ಲರೂ ನಿನ್ನ ಹಾಗೇ ಇರಬೇಕು ಅಂತ. (ಬುಟ್ಟಿಯ ಕಡೆ ಹರಿದುಹೋಗುತ್ತ) ನಾನು ಯಾರ ಹಾಗೂ ಇರಲ್ಲ. ನನಗೆ ಹೇಗೆ ಸರೀನೋ ಹಾಗೇ ನಾನು ಮಾಡ್ತೀನಿ.

ಕುಟುಕ : (ಜಗಳಕ್ಕೆ ಪುನಃ ನುಗ್ಗಿ) ನಿನ್ನ ಬಿಡಲ್ಲ! ನಿನ್ನ ಬಿಟ್ಟರೆ ತಾನೆ! (ಹಾವು ಮರಕುಟುಕರ ಜಗಳ ಮುಂದುವರಿಯುವುದು. ಕುಟುಕ ಚಾಲಾಕಾಗಿ ನೆಗೆದು, ಹಾರಿ, ವಿಷದಂತನನ್ನು ಕುಕ್ಕಿ, ಕುಕ್ಕಿ, ಕುಕ್ಕುವುದು ; ವಿಷದಂತ ಹೆಡೆ ಎತ್ತಿ ಪುತ್ತೆ ಮುತ್ತೆ ಕುಟುಕನನ್ನು ಕಚ್ಚಲು ಹೆದೆ ಹೊಡೆಯುವುದು. ಕುಟುಕ ಪುರ್ರನೆ ಹಾರಿ ಹಾವಿನ ಹೊಡೆತದಿಂದ ತಪ್ಪಿಸಿಕೊಳ್ಳುವುದು. ಒಂದೊಂದು ಕುಕ್ಕಿಗೂ ಹಾವಿನ ಕಳ್ಳತನವನ್ನು ಜ್ಞಾಪಿಸಿ) ಹಾಗೆ! ಅದು, ಒಂದು ಮೊಟ್ಟೆ ನುಂಗಿದ್ದಕ್ಕೆ! ಇದು, ಇನ್ನೊಂದಕ್ಕೆ!

ವಿಷದಂತ : (ಪೆಟ್ಟು ತಿಂದು) ಓ! (ಹೆಡೆಯನ್ನು, ಕುಟುಕ ಸುತ್ತಿದಂತೆ ತಿರುಗಿಸುತ್ತ, ಕುಟುಕನನ್ನು ಕಚ್ಚಲು ಹೊದೆಯುತ್ತ ಹೋಗುವುದು. ಆದರೆ ಕುಟುಕ ತಪ್ಪಿಸಿಕೊಳ್ಳುವುದರಿಂದ, ಹೆಡೆಯನ್ನು ಮತ್ತೆ ಮತ್ತೆ ನೆಲಕ್ಕೆ ಹೊಡೆಯುವುದು.) ನಿಲ್ಲಿಸು, ಕುಟುಕ! ನನಗೆ ಹಾರಕ್ಕೆ ಆಗಲ್ಲ, ನಿನಗೆ ಆಗತ್ತೆ—ತಪ್ಪಿಸಿಕೋತೀನಿ ಅಂದುಕೊಂಡಿದೀಯಾ ?

ಕುಟುಕ : ತಪ್ಪಿಸಿಕೋತೀನಿ. ನುಸಿಯೋ, ಹರಿಯೋ, ನುಣುಚಿಕೋಳೋ ನೀಚ! (ಕುಕ್ಕಿ) ತಗೊ ಇದನ್ನ! ಇನ್ನೆಂದೂ ಇಲ್ಲಿ ತಲೆಹಾಕದ ಹಾಗೆ!

ವಿಷದಂತ : (ನೋವಿನಿಂದ) ಅ! (ರೋಷದಿಂದ ಅಟ್ಟಿಸಿಕೊಂಡು ಹೋಗಿ ಕುಟುಕನನ್ನು ಹೆದೆಯಿಂದ ಹೊಡೆದು ಕಚ್ಚಿ, ಆವೇಶದಿಂದ ತಲೆಯನ್ನು ಪಕ್ಕಕ್ಕೆ ತಿರುಚಿ, ಬಾಯಿಚೀಲದಿಂದ ಕುಟುಕನ ಗಾಯಕ್ಕೆ ವಿಷವನ್ನು ಸುರಿದುಬಿಡುವುದು! ಹೆಡೆ ಎತ್ತಿ) ನನ್ನ ವಿಷ ಎಲ್ಲಾ ಸುರಿದುಬಿಟ್ಟೆ! ಹೋದರೆ ಹೋಗಲಿ!

ಕುಟುಕ : (ಬಿದ್ದು ಮುಲಮುಲಗುಟ್ಟುತ್ತ, ಕೆಕ್ಕೆ ಕಾಲುಗಳನ್ನು ಸಂಕಟದಿಂದ ಒದರುತ್ತ) ಆಂ! ಹೇಡಿ! ಹೊಟ್ಟೆ ಒಳಗೆ ಚುಚ್ಚಿ ಕಚ್ಚಿದೀಯಾ!

ವಿಷದಂತ : ಹ ಹ ಹಾ! ನನ್ನ ಜೊತೇಲಿ ಕುಸ್ತಿ ಮಾಡಕ್ಕೆ ನೀನೇನೋ ದೊಡ್ಡ ಗಿಡಗ ಅಂದುಕೊಂಡುಬಿಟ್ಟೆ ಅಲ್ಲವೇ ? ನಾನು ಕಾಳನಾಗ! (ಸರಸರನೆ ಬುಟ್ಟಿಗೆ ಹರಿದುಹೋಗಿ ಪೊಟ್ಟೆ ನುಂಗಲು ಪ್ರಾರಂಭಿಸುತ್ತದೆ.)

ಕುಟುಕ : (ಕೂಗಿಕೊಳ್ಳುತ್ತ) ಕಾಳಾ, ಕಾಳೀ! ಬೇಗ ಬನ್ನೀ! ಹಾರಿ ಬನ್ನೀ! ವಿಷದಂತಾ—ನಿಮ್ಮೆ ಮೊಟ್ಟೆ ಕಳ್ಳಾ! ಹಿಡೀರಿ ಕಳ್ಳನ್ನಾ! ತಡೀರಿ ಕಳ್ಳನ್ನಾ!

Sri Vidyabharathi Book Centre, Sringeri

CC-0. In Public Domain. Digitized by eGangotri

ಹೊಡೀರಿ ಕಳ್ಳನ್ನಾ ! (ವಿಷದಂತ ಸರಸರನೆ ಹರಿದು ಓಡಿಹೋಗುತ್ತಿರುವುದನ್ನು ನೋಡಿ) ಅಯ್ಯೋ, ಯಾರೂ ಬರಲಿಲ್ಲವಲ್ಲಾ ! ಎಲ್ಲಿದೀರೀ ? (ವಿಷದಂತ ಕಣ್ಮರೆಯಾಗುವುದು.) ಹೋದ ಕಳ್ಳ ! ಹೊರಟೇಹೋದ ! ಅಯ್ಯೋ, ತಪ್ಪಿಸಿಕೊಂಡೇಬಿಟ್ಟನಲ್ಲಾ ! ಅಯ್ಯೋ, ಅಯ್ಯೋ ! (ಎಂದು ಸಂಕಟದಿಂದ ಪ್ರಾಣ ಬಿಟ್ಟುಬಿಡುವುದು.)

(ಸ್ವಲ್ಪ ಹೊತ್ತಿನಲ್ಲೇ ಎರಡು ಕಾಗೆಗಳೂ ಹಾರಿ ಒಳಕ್ಕೆ ಬರುವುವು. ಕುಟುಕ ಕಾಣಿಸುವುದಿಲ್ಲ.)

ಕಾಳಿ : ಎಲ್ಲಿ ಕುಟುಕಾ ? ನಮಗೆ ಮಾತುಕೊಟ್ಟು—ಇವನ್ನ ನೆಚ್ಚಿ ನಾವು ಆಚೆ ಹೋದ್ರೆ, ಆಸಾಮಿ ಎಲ್ಲೋ ಪರಾರಿ !

ಕಾಳ : ಎಲ್ಲಿ ಹೋದಾ ? (ಸಂಶಯದಿಂದ) ಅವನು ಅಂಥವನಲ್ಲ ! (ದೂರದಲ್ಲಿ ಮೂಲೆಯಲ್ಲಿ ಕುಟುಕನು ಮಲಗಿರುವುದನ್ನು ಕಂಡು) ಆಗೋ, ಅಲ್ಲಿ ನೋಡು ! ನಂಗೊತ್ತು ! ಕೊಟ್ಟ ಮಾತಿಗೆ ತಪ್ಪೋನಲ್ಲ, ನನ್ನ ಗೆಳೆಯ.

ಕಾಳಿ : ಓ ! ಮಲಗಿ ನಿದ್ದೆಹೊಡೀತಿದಾನೆ ! ಒಳ್ಳೆ ಗೆಳೆಯ ! ಇಂಥವರೇ ನಿನಗೆ ಸಿಕ್ಕೋರು. (ಪೊಟ್ಟೆಬುಟ್ಟಿಗೆ ಓಡುವುದು.)

ಕಾಳ : (ಕುಟುಕನ ಹತ್ತಿರ ಓಡಿಹೋಗಿ, ಆದರ ಮೈಯನ್ನು ಅಲ್ಲಾಡಿಸುತ್ತ) ಕುಟುಕಾ, ಕುಟುಕಾ, ಏಳು, ಎದ್ದೇಳು. (ಗಾಯವನ್ನು ನೋಡಿ, ಗಾಬರಿಯಿಂದ) ಹಂ ! ಹೊಟ್ಟೆಯಿಂದ ರಕ್ತ ಸುರೀತಿದೆ ! ಕಾಳೀ....

ಕಾಳಿ : ನನ್ನ ಮೊಟ್ಟೆ, ನನ್ನ ಮೊಟ್ಟೇ ! ಇನ್ನೊಂದೂ ಹೋಯ್ತು !

ಕಾಳ : ಮೊಟ್ಟೇನೂ ಹೋಯ್ತೇ ? ಕುಟುಕಾನೂ ಪೆಟ್ಟು ತಿಂದಿದಾನೆ ! ಅದೇ ಹಿಂದಿನ ಕಳ್ಳಾನೇ ಇರಬೇಕು ! (ಕುಟುಕನನ್ನು ಎಬ್ಬಿಸಲು ಯತ್ನಿಸುತ್ತ) ಕುಟುಕಾ, ಕುಟುಕಾ, ಹೇಳು : ಯಾರು ಹೇಳು, ಕುಟುಕಾ. (ಜೀವದ ಗುರುತೇ ಇಲ್ಲದಿರುವುದನ್ನು ಕಂಡು) ಕಾಳಿ, ಕುಟುಕ ಸತ್ತೇಹೋಗಿದಾನೆ !

ಕಾಳಿ : (ಓಡಿಬಂದು) ಹಂ ! ಸತ್ತೇಹೋಗಿದಾನೆಯೇ ?

ಕಾಳ : ನೀರಲ್ಲಿ ಮಗುಚಿಕೊಂಡ ಇಲಿ ಹಾಗೆ—ಅವನಾಸೆ ಇನ್ನಿಲ್ಲ !

ಕಾಳಿ : ಅಯ್ಯೋ ಪಾಪ ! (ಬುಟ್ಟಿ ಕಡೆಗೆ ಹೋಗುತ್ತ) ಅವನ ಕಂದುಬಣ್ಣದ ಮೈ, ರೆಕ್ಕೆ ಮೇಲಿನ ಪಟ್ಟೆಗಳು, ತಲೆ ಮೇಲೆ ಅರಳುತಿದ್ದ ತುರಾಯಿ, ಎಲ್ಲಾ ಸ್ಪೇರಿ ಎಷ್ಟು ಚೆನ್ನಾಗಿ ಕಾಣಿಸ್ತಿದ್ದ ! ಅವನ ನಡೇನೇ ಒಂದು ಸೊಗಸು !

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಳ : (ಅಸೂಯೆಯಿಂದ) ನಿನಗೆ ಸೊಗಸಾಗಿರಬಹುದು. ಕಪ್ಪಿಗಿಂತ ಯಾವುದೂ ಚೆನ್ನಿಲ್ಲ ನಂಗೆ. ಥಳಥಳಾಂತ ಹೊಳೆಯೋ ತಲೇನೇ ಚಂದ.

ಕಾಳಿ : ಸತ್ತ ಮಿತ್ರನ ಮೇಲೇ ಕರುಬೋಕ್ಕೆ ನಾಚಿಕೆ ಆಗಲ್ವೆ ?

ಕಾಳ : ನೀನೀಗ ನನ್ನ ರೇಗಿಸಿದ್ದು. ನನ್ನ ಹೆಂಡತೀನಾದ್ರೂ ನನ್ನ ಕಂಡ್ರೆ ಹೆಮ್ಮೆಪಡ್ತಾಳೆ ಅಂದುಕೊಂಡಿದ್ದೆ.

ಕಾಳಿ : ನಿನ್ನ ಗೆಳೆಯ ಅಲ್ಲವೆ ಅವನು ?

ಕಾಳ : ನಿನ್ನ ಮೊಟ್ಟೇಗೋಸ್ಕರ ಅಲ್ಲವೆ ಅವನು ಸತ್ತಿದ್ದು ?

ಕಾಳಿ : ಅವನು ಸತ್ತಿದ್ದರಿಂದ ಬಹಳ ಲಾಭ ಆಯ್ತು ನಂಗೆ : ಇನ್ನೊಂದು ಮೊಟ್ಟೆ ಹೋಯ್ತು, ಅಷ್ಟೆ.

ಕಾಳ : ಇನ್ನೇನು ಮಾಡಬೇಕಿತ್ತು ಅವನು ? ಜೀವಾನೆ ಕೊಟ್ಟನಲ್ಲಾ ನಿನ್ನ ಮೊಟ್ಟೇಗೋಸ್ಕರ !

ಕಾಳಿ : ಯಾರೇನಾರೂ ಕೊಡಲಿ ಬಿಡಲಿ : ನನ್ನ ತಕ್ಕ ಉಳಕೊಂಡ್ರೆ ಸಾಕು.

ಕಾಳ : ಆಗಲಿ ನೋಡ್ತಿರು : ಅವನು ಯಾರೇ ಆಗಲಿ, ಕೊಲೆಗಾರ, ಬರಲಿ. ಏನು ಮಾಡ್ತೀನಿ ಅವನಿಗೆ !

(ಕಾಳ ಹೀಗೆ ಹಟ ತೊಡುತ್ತಿರುವಾಗಲೇ ವಿಷದಂತ ಬುಟ್ಟಿಯ ಕಡೆ ಹರಿದು ಹೋಗುತ್ತಿರುವುದು ಕಾಳಿಯ ಕಣ್ಣಿಗೆ ಬೀಳುವುದು.)

ಕಾಳಿ : (ನಡುಗುತ್ತ) ಕಾಳಾ ! ಕಾಳಾ ! ನೋಡಲ್ಲಿ, ವಿಷದಂತ ! ಅವನೇ ಇರಬೇಕು !

ಕಾಳ : (ಹಾವಿನ ಮೇಲೆ ಹಾರಿಬೀಳುತ್ತ) ಆ ! ನೀನೇ ನಮ್ಮ ಶತ್ರು !

ಕಾಳಿ : ನೆರೆಯೋರನ್ನೇ ನೆಚ್ಚೋಹಾಗಿಲ್ಲವಲ್ಲ ಈ ಕಾಲದಲ್ಲಿ !

ಕಾಳ : (ಹಾವಿನ ತಲೆಯ ಮೇಲೆ ಕುಕ್ಕಿ) ತಗೊ ಇವನ್ನ !

(ವಿಷದಂತ ಎದ್ದು ಹೆಡೆ ಬಿಟ್ಟು, ಭಯಂಕರ ಹಲ್ಲುಗಳನ್ನು ಬಿಡುವುದು.)

ವಿಷದಂತ : ಭುಸ್ ! ಪುಷಾರ್ !

ಕಾಳಿ : ಜೋಕೆ, ಜೋಕೆ !

ಕಾಳ : ಹಾಳು ಹಾವೆ !

(ಎರಡೂ, ಕುಕ್ಕುತ್ತ, ಕಚ್ಚಲು ಯತ್ನಿಸುತ್ತ, ಭುಸುಗುಟ್ಟುತ್ತ, ಹೊಡೆದಾಡುವವು. ಧೈರ್ಯತಾಳಿ, ಕಾಳಿಯೂ ಹಾರಾಡುತ್ತಾ ವಿಷದಂತನನ್ನು ಹಿಂದಿನಿಂದ ಹೋಗಿ ಕುಕ್ಕುವುದು.)

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷದಂತ : (ಇಬ್ಬರ ಮಧ್ಯೆ ಸಿಕ್ಕಿಕೊಂಡು) ಹೇಡಿಗಳಾ ! ಒಬ್ಬನ ಮೇಲಿಬ್ರು! ನೀವು ಹಾರಿ, ಕುಪ್ಪಳಿಸಿ, ನೆಗೀತೀರಿ : ನನಗೆ ಆಗಲ್ಲ ; ಆದರೂ ಸರಿ, ಒಬ್ಬೊಬ್ಬರಾಗಿ ಬನ್ನಿ ಕುಸ್ತೀಗೆ, ಇಬ್ಬರಿಗೂ ಸೈ !

ಕಾಳಿ : ನೀನು ಹೇಡಿ ! ನನ್ನ ಮೊಟ್ಟೆ ಪರೀಲಾರವು. ಹಾರಲಾರವು. ಅವು ಗಳನ್ನ ನುಂಗಲಿಲ್ಲವೇ ನೀನು—ನುಣುಚಿಕೊಂಡು, ನುಸುಕೊಂಡು, ಸೊಟ್ಟಸೊಟ್ಟಗೆ ಸರಿದುಹೋಗೋ ಕೊಲೆಪಾತಕಾ !

ವಿಷದಂತ : (ಜಂಬದಿಂದ ತಲೆ ತಿರುಗಿಸಿಕೊಂಡು ಹೊರಕ್ಕೆ ಹೊರಡುತ್ತ) ಹೆಣ್ಣಿನ ಕೈಲಿ ನಾನು ವಾದಕ್ಕಿಳಿಯಲ್ಲ.

ಕಾಳ : (ಮೇಲೆಬಿದ್ದು) ನಿಲ್ಲು. ಕೊರಮಾ ! ನಿನ್ನ ಸಾಯಿಸದೆ ಬಿಡಲ್ಲ !

(ವಿಷದಂತನನ್ನು ಕುಕ್ಕುವುದು.)

(ವಿಷದಂತ ಹೆಡೆಬಿಟ್ಟು ಬುಸುಗುಟ್ಟುತ್ತ ಹೆದರಿಸುವುದು.)

ಕಾಳಿ : (ಕಾಳನನ್ನು ಹಿಡಿದೆಳೆಯುತ್ತ) ಬೇಡ, ಕಾಳಾ, ಬಿಟ್ಟುಬಿಡು ! ನೀನು ಒಬ್ಬನೇ ಅವನನ್ನು ಕೊಲ್ಲಕ್ಕಾಗಲ್ಲ ! ಬಂದುಬಿಡು ! ಸಾಯೋ ಹಾಗೆ ಕಚ್ಚಿಬಿಡ್ತಾನೆ ಅವನು !—ಕುಟುಕನ್ನ ಇವನೇ ಸಾಯಿಸಿರಬೇಕು !

ವಿಷದಂತ : ಹ ಹಾ ! ಈಗ ತಿಳೀತೋ, ಮುಂಕೇ ? ನಿನ್ನ ಹೆಂಡತಿ ಕಾಲ ಬೆರಳಲ್ಲಿರೋ ಬುದ್ದಿ ನಿನ್ನ ತಲೇಲಿಲ್ಲ. (ಹೊರಟುಹೋಗುತ್ತ) ನಾಕು ರೆಕ್ಕೆ ಬಡಿದುಕೊಂಡು ಹಾರಾಡಿದರೂ, ನೀವು ನನ್ನ ಮುಟ್ಟಕ್ಕೂ ಆಗಲ್ಲ.

(ಸರಸರನೆ ಮರೆಯಾಗುವುದು.)

ಕಾಳ : ಸರ್ಪ ! ಕಳ್ಳ ಕೊಲೆಗಾರ ! ತಾಳು, ನಿನಗೆ ಮಾಡ್ತೀನಿ !

ಕಾಳಿ : (ಬುಟ್ಟಿ ಹತ್ತಿರ ಹೋಗಿ) ಓ, ಈಗೇನು ಮಾಡೋದು, ಕಾಳಾ ? ಏನಾರೂ ಮಾಡಬೇಕು ವಿಷದಂತನ ಹಾವಳಿ ತಪ್ಪೋಕ್ಕೆ !

ಕಾಳ : (ಏನೂ ತೋಚದೆ) ಹೌದು, ಏನಾದರೂ ಮಾಡಬೇಕು ; ಆದ್ರೆ, ಏನು ಮಾಡೋದು ?

ಕಾಳಿ : (ಮೇಲೆ ಮರದಲ್ಲಿ ಏನನ್ನೊ ಕಂಡು) ಅಲ್ಲಿ ನೋಡು, ಕಾಳ ; ದೇವರೇ ಕಳಿಸಿದಾನೆ ! ಗರುಡ ! ನಮಗೆ ಬೇಕಾದೋನೇ ; ಸರಿಯಾದ ಸ್ನೇಹಿತ !

ಕಾಳ : ಸ್ನೇಹಿತ ! ಯಾವಾಗಿನಿಂದ ಸ್ನೇಹ ? ಕೆಳಗೆ, ನಮ್ಮ ಕಡೆ, ಕಣ್ಣೆಳಿಸಿ ನೋಡೋದೂ ಇಲ್ಲ ಅವನು ! ತನ್ನ ಮೈ ಬೆಳ್ಳಗಿದೆ ಅಂತಾ ಅವನಿಗೆ ಏನೋ ಜಂಭ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಳಿ : ಹೌದು, ಅವನು ಯಾಕೆ ನಮ್ಮ ಕಡೆ ನೋಡಬೇಕು ? ನಮಗೀಗ ಅವನ ಸಹಾಯ ಬೇಕು. ಹೋಗಿ ಸ್ನೇಹ ಮಾಡಿಕೊಳ್ಳೋಣ ಬಾ, ಕಾಳ. ಅವನ ಕೈಲಿ ನಮ್ಮ ಕಪ್ಪ ಹೇಳಿಕೊಳ್ಳೋಣ, ಬಾ. ತನ್ನ ಪಂಜಗಳಿಂದ ವಿಷದಂತನನ್ನು ಸೀಳಿಹಾಕಬಲ್ಲ ಅವನು. ಹಾವೂ ಅಂದ್ರೆ ಗರುಡನಿಗೆ ಹಬ್ಬದ ಊಟ. ಖುಶಿಯಾಗಿ ಕೊಂದುಹಾಕಿಬಿಡ್ತಾನೆ!

ಕಾಳ : ನಿಂದೊಂದು ಹುಚ್ಚು ಕನಸು. ಅವನ ತಲೆ ಯಾವಾಗಲೂ ಆಕಾಶದಲ್ಲೇ ತೇಲುತಿರತ್ತೆ ; ನಾವು, ಬಡಪಾಯಿ ಕಾಗೆಗಳು, ಅವನ ಕಣ್ಣಿಗೂ ಬೀಳಲ್ಲ. (ಉದಾಸೀನವಾಗಿ ತಿರುಗಿಕೊಂಡು ಬೇರೆ ಕಡೆ ಹೋಗುತ್ತ) ತಾನೇನೋ ದೊಡ್ಡ ಮಹಾರಾಜಾ ಅಂದುಕೊಂಡಿದಾನೆ ಅವನು.

ಕಾಳಿ : (ಕೋಪದಿಂದ) ನೀನೊಬ್ಬ ಪುಕ್ಕಲ, ನಂಗೊತ್ತು. ಅವನ ಮುಂದೆ ಹೋಗೋಕ್ಕೆ ನಿಂಗೆ ಎದೆ ಇಲ್ಲ. ನಾನೇ ಕೇಳಿಕೋತೀನಿ. ಗಂಡಂದಿರನ್ನ ನೆಚ್ಚಿಕೊಂಡರೆ ಮಕ್ಕಳು ಉಳಿಯೋಹಾಗಿಲ್ಲ. (ಒಂದು ಕಡೆಗೆ ಹೋಗಿ ತಲೆ ಎತ್ತಿ) ಗರುಡಾ, ಓ ಗರುಡಾ ! ಈ ಕಡೆ ನೋಡು. ಇಲ್ಲಿ, ಕೆಳಗೆ ನೋಡು, ಗರುಡಾ ! (ಹಿಂದಿರುಗಿ ಬಂದು, ಕಾಳನಿಗೆ) ನಾನು ಕೂಗೋದು ಅವನಿಗೆ ಕೇಳಲ್ಲ : ನೀನು ಗಟ್ಟಿಯಾಗಿ ಕೂಗು, ಕಾಳ—ನನಗೋಸ್ಕರ.

ಕಾಳ : (ಖಂಡಿತವಾಗಿ ತಲೆ ಅಲಾ ಡಿಸುತ್ತ) ಉಹುಂ. ನಾನು ಬಡ ಕಾಗೆ ಇರಬಹುದು, ಆದರೆ ನಂಗೂ ನನ್ನ ಮಾನಮರ್ಯಾದೆ ಇದೆ.

ಕಾಳಿ : ನಮ್ಮ ಕೆಲಸಕ್ಕೋಸ್ಕರ ಕತ್ತೆ ಕಾಲಾರೂ ಕಟ್ಟಿಕೋಬೇಕು. (ಕಾಳನನ್ನು ಎಳೆಯುತ್ತ) ಬಾ, ಕೂಗು : ಬೇಡಿಕೊಳ್ಳೋಣ, ಬಾ.

ಕಾಳ : ನಮ್ಮವರನ್ನು ಬೇಡಿಕೊಳ್ಳೋದು ಇನ್ನೂ ಅವಮಾನ : ನಾ ಬೇಡಲ್ಲ.

ಕಾಳಿ : ಆಗಲಿ, ತಿರುಗಿ ನಾನೇ ಕೇಳಿಕೋತೀನಿ. (ಹೋಗಿ ಕೂಗುತ್ತ) ಗರುಡಾ, ಅಣ್ಣಾ ಗರುಡಾ : ವಿಷ್ಣುವಾಹನಾ, ಪಕ್ಷಿರಾಜಾ, ಈ ಕಡೆ ನೋಡಣ್ಣಾ. (ನಿರಾಶೆಯಿಂದ ಹಿಂದಿರುಗುತ್ತ) ನಮ್ಮೋರು ನಮಗೆಂದೂ ಆಗಲ್ಲ. ಈಗ ಮುಂಗುಸಿ ಇದ್ದಿದ್ರೆ !

ಕಾಳ : (ಫಟ್ಟನೆ ಎಚ್ಚೆತ್ತು) ನಿಜ ! ಮುಂಗುಸಿ ವಾಸನೆ ಬಂದರೆ ಹಾವು ಹುತ್ತದಿಂದ ಆಚೆ ತಲೆಹಾಕಲ್ಲ ! ಎಲ್ಲಿ ಹೋಗಿದೆ ಮುಂಗುಸಿ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಳಿ : ಎಲ್ಲೋ ದೂರ ಯಾತ್ರೆ ಹೋಗಿದೆ. (ವ್ಯಸನದಿಂದ) ನನ್ನ ದೆಸೆ ಕೆಟ್ಟದು. (ಕಾಳನ ಪಕ್ಕಕ್ಕೆ ಬಂದು ಪೂಸಿ ಮಾಡುತ್ತ) ಕಾಳ, ನವಿಲಿಗೆ ಏಕೆ ನಮ್ಮ ಕಷ್ಟ ಹೇಳಿಕೋಬಾರ್ದು ? ನವಿಲನ್ನ ಕಂಡರೆ ವಿಷದಂತ ನಡುಗತ್ತಾನೆ !

ಕಾಳ : (ಬೇರೆ ಕಡೆ ತಲೆ ತಿರುಗಿಸಿಕೊಂಡು ಹೋಗುತ್ತ) ಉಹುಂ. ಅವನ ಚಾಮರದ ಬಾಲ, ಚಿಮಿಕಿ ಮೈ ಮುಂದೆ ನಾ ಹೋದರೆ, ಯಾರೋ ತಿರುಕನ ಹಾಗೆ ಕಾಣಿಸ್ತೀನಿ ! ಜಂಭದ ಕೋಳಿ ! ನಾ ಹೋಗಲ್ಲ ಅವನ ಹತ್ತಿರ.

ಕಾಳಿ : (ಕೋಪದಿಂದ) ನಿಂದೀಗ ನವಿಲಿಗಿಂತ ಜಂಭ ! ಗಂಡಿನ ಮೊಂದು ! ಯಾವಾಗಲೂ ತಾನು, ತಾನು ; ತನ್ನ ಯೋಚನೇನೆ !

ಕಾಳ : (ಥಟ್ಟನೆ ಖುಶಿಯಿಂದ) ಆಲ್ಲಿ ನೋಡು ! (ಕೂಗುತ್ತ) ಜಂಬೂ, ಜಂಬೂ ! (ಕಾಳಿಗೆ) ತಿರುಗಿದ ! ಬರ್ತಿದಾನೆ ಜಂಬು ! ನಮಗೆ ಬೇಕಾದವನು ! ನರೀಗೆ ಹರೀದಿರೋ ಪ್ರಶ್ನೇನೇ ಇಲ್ಲ : ಒಂದಲ್ಲ ಒಂದು ಉಪಾಯ ಕಂಡುಹಿಡೀಬಲ್ಲ ಜಂಬು !

ಕಾಳಿ : (ಸ್ವಲ್ಪ ತಿರಸ್ಕಾರದಿಂದ) ತನಗೆ ಲಾಭ ಇಲ್ಲದಿದ್ರೆ ತಲೇನೇ ಓಡಲ್ಲ ಅವನಿಗೆ.

(ಜಂಬು ಚುರುಕಾಗಿ ಪ್ರವೇಶಿಸುವುದು.)

ಜಂಬು : ಏನು, ಮಿತ್ರರೇ ? ಏನು ವಿಚಾರ ? ಹೇಗಿದೀರೀ ? ನೀವು ನನ್ನ ಕರೆಯೋದೇ ಅಪರೂಪ.

ಕಾಳ : ಬಾ, ಒಳಗೆ ಬಾ, ಜಂಬು. ನಿನ್ನಿಂದ ದೊಡ್ಡ ಉಪಕಾರ ಆಗಬೇಕು ನಮಗೆ ; ನಾವು ಕಷ್ಟಕ್ಕೆ ಸಿಕ್ಕೊಂಡುಬಿಟ್ಟಿದೀವಿ.

ಜಂಬು : ಹಾಗೇ ? ಆಯ್ಯೋ ಪಾಪ. ಸಂಕಟ ಬಂದಾಗ ವೆಂಕಟರಮಣ. ಹೇಳಿ, ಆದೇನು ನಿಮ್ಮ ಕಷ್ಟ ?

ಕಾಳಿ : ಆ ಮನೆಹಾಳ ವಿಷದಂತ, ಆಲ್ಲಿ ಹುತ್ತದಲ್ಲಿ ಆಡಗಿದಾನಲ್ಲಾ, ಅವನು ನನ್ನ ತತ್ತಿಗಳನ್ನೆಲ್ಲಾ ಒಂದಾದಮೇಲೊಂದು ತಿಂದುಹಾಕಿಬಿಡ್ತಿದಾನೆ, ಜಂಬೂ ! ಇದುವರೆಗೂ ಕಳ್ಳ ಯಾರೂ ಆನ್ನೋದೇ ಗೊತ್ತಿರಲಿಲ್ಲ ನಮಗೆ. ಈಗ, ನೀ ಬರೋಕ್ಕೆ ಸ್ವಲ್ಪ ಮುಂಚೆ ಮೊಟ್ಟೆಒಟ್ಟೀಗೆ ಹರಿದು ಕೊಂಡು ಬರುವುದನ್ನು ಕಣ್ಣಾರೆ ನೋಡಿದ್ರೀ. ಸುಕ್ಕು ಸುಕ್ಕು ಮಾಡಿ ಓಡಿಸಿ

CC-O. Jayachamarajendra Book Centre, Sringeri

CC-O. In Public Domain. Digitized by eGangotri

ದೆವು ! ಆದರೆ ಆವನು ಬಿಡಲ್ಲ, ನಂಗೊತ್ತು ; ಗುರ್ತು ಕಂಡ ಕಳ್ಳ, ಮತ್ತೆ ಬಂದೇ ಬರ್ತಾನೆ ! ನನ್ನ ಮೊಟ್ಟೆಗಳನ್ನೆಲ್ಲಾ ನುಂಗಿಹಾಕಿಬಿಡತಾನೆ !

ಕಾಳ : ಹಿಂದಿನ ಸಲಾನೂ ಹಾಗೇ ಮಾಡಿದ ! ನೀನು ನಮಗೆ ಸಹಾಯ ಮಾಡಬೇಕು, ಜಂಬು !

ಜಂಬು : ಹಾಗೋ ? (ಒಂದು ಕಡೆಯಿಂದ ಇನ್ನೊಂದು ಕಡೆಗೆ ಅಡ್ಡಾಡುತ್ತ) ಯೋಚಿಸಬೇಕು, ಕಾಳ. ವಿಚಾರ ಚೆನ್ನಾಗಿ ಯೋಚಿಸಬೇಕು, ಕಾಳಿ. ಹಾವು ಹಾವೇ, ಮೊಟ್ಟೆ ಮೊಟ್ಟೆಯೇ ; ಕಾಗೆಗಳು, ಪಾಪ, ಹೇಗಾದರೂ ಕಾಗೆ ಮಾತ್ರ. ಆಳವಾಗಿ, ದೀರ್ಘವಾಗಿ, ಶಾಂತವಾಗಿ ಯೋಚಿಸಬೇಕಾಗತ್ತೆ ವಿಚಾರಾನ.

ಕಾಳ : ಯೋಚಿಸೋದರಲ್ಲಿ, ಉಪಾಯ ಹುಡುಕೋದರಲ್ಲಿ, ನೀನು ನಿಸ್ಸೀಮ, ಜಂಬೂ. ಮನಸ್ಸು ಮಾಡಿದರೆ, ಚಿಟ್ಟೆ ರೆಕ್ಕೆ ಹೊಡೆಯೋಷ್ಟರಲ್ಲಿ ಉಪಾಯ ಕಂಡುಹಿಡಿದುಬಿಡತೀಯೆ ನೀನು ! ಆದಕ್ಕೇ ನಿನ್ನ ಕರೆದೆ.

ಜಂಬು : ಓ, ಅಗತ್ಯವಾಗಿ. ನನ್ನ ಕೈಲಾದ್ದನ್ನ ಮಾಡೋಕ್ಕೆ ಸಿದ್ಧ. ಆದ್ರೆ ಈಗ ಹೇಗೆ ಯೋಚಿಸಬೇಕು ಗೊತ್ತೇ ? ಹುಲಿ ಆಟ್ಟಿಸಿಕೊಂಡು ಬರುತಿದ್ರೆ ಉಸಿರು ಕಟ್ಟಿ ಹೇಗೆ ಓಡ್ತೀಯೋ ಹಾಗೆ ಒಂದೇ ಮನಸ್ಸಲ್ಲಿ ಯೋಚಿಸಬೇಕು !

ಕಾಳ : ಹೌದು, ಹೌದು ! ಈಗ ಹಾವು ನಮ್ಮ ಮೊಟ್ಟೆ ಆಟ್ಟಿಸಿಕೊಂಡೇ ಬರ್ತಿದೆಯಲ್ಲಾ !

ಕಾಳಿ : ನಮ್ಮ ಮೊಟ್ಟೆ ನಮಗೆ ನಮ್ಮ ಜೀವಕ್ಕಿಂತ ಹೆಚ್ಚು !

ಜಂಬು : ಆಲ್ವೇ ! ಅದ್ನರಿಂದ ಈ ವಿಚಾರಾನ ದೀರ್ಘವಾಗಿ, ಆಳವಾಗಿ ; ಕೆಳಗಿಂದ ಮೇಲಕ್ಕೆ, ಮೇಲಿಂದ ಕೆಳಕ್ಕೆ ; ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ, ತರಾವರಿ ಯೋಚಿಸಬೇಕು.

ಕಾಳ : (ಬೆರಗಾಗಿ) ನಿಜವಾಗ್ಲೂ ಯೋಚಿಸೋದು ಇಷ್ಟು ಕಷ್ಟಾಂತ ನನಗೆ ಗೊತ್ತೇ ಇರಲಿಲ್ಲ !

ಜಂಬು : (ಒಂದು ಕಡೆಯಿಂದ ಇನ್ನೊಂದು ಕಡೆಗೆ ಅಡ್ಡಾಡುತ್ತ) ನೋಡು, ಈವಾಗ ನಾ ಯೋಚಿಸೋ ಬಗೇನ. ಸಂದರ್ಭ ಹೀಗಿದೆ : ಹೆಡೆಹಾವು ವಿಷದಂತ ಒಂದು ಕಡೆ ಮತ್ತೆ ಕಾಗೆ ಕೊಲೆಗಡುಕ ಮೊಟ್ಟೆಗಳು ಇನ್ನೊಂದು

Sri Vidyarathi Book Centre, Tringeri

 CC-0. In Public Domain. Digitized by eGangotri

ಕಡೆ. ಹಾವು ಕಾಗೇನ ಕಂಡ್ರೆ ವಿಷ ಕಾರತ್ತೆ; ಕಾಗೇಗೆ ಹಾವು ಕಂಡ್ರೆ ಕಣ್ಣು ಕೆಂಪಗಾಗತ್ತೆ. ಹೌದೋ ಅಲ್ಲವೋ ?

ಕಾಳಿ : (ಜಂಬುವಿನ ತರ್ಕಸರಣಿಗೆ ತಲೆದೂಗುತ್ತ) ಹೌದು, ಹೌದು. (ಕಾಳಿ, ಜಂಬುವಿನ ಮೇಲೆ ಅನುಮಾನದಿಂದ, ಎಚ್ಚರಿಕೆ ತಪ್ಪದೆ, ಕಣ್ಣಿಟ್ಟೇ ಇದೆ.)

ಜಂಬು : ಈಗ, ಹೆಡೆಹಾವನ್ನು ಬಲಿಹಾಕಿ, ಕಾಗೆ ಮೊಟ್ಟೆಗಳನ್ನು ಹಾವಿನ ಹಲ್ಲುಗಳಿಂದ ಬಿಡಿಸಿ...

ಕಾಳಿ : ಏನು ! ನನ್ನ ಮೊಟ್ಟೆ, ಹಾವಿನ ಹಲ್ಲಿಗೆ ಸಿಕ್ಕೋತನಕ ಕಾಯಬೇಕೇ ?

ಕಾಳಿ : ಕೂಡದು ! ಕೂಡದು !

ಜಂಬು : (ಆಸಮಾಧಾನದಿಂದ) ತಾಳಿ, ಸ್ವಲ್ಪ ತಾಳಿ; ನಾನು ಹೇಳೋದನ್ನ ಪೂರ್ತಿ ಕೇಳಿ. (ಕಾಳಿಗೆ) ಹೆಣ್ಣಿಗೆ ಆತುರ ಅಂದ್ರೆ, ನೀನೂ ಅವಳ ಹಿಂದೇನೇ ಹೋಗಬೇಕೇ ? ಒಬ್ರು ಮಾತು ಮುಗಿಸೋಕ್ಕೆ ಮುಂಚೆ ಇನ್ನೊಬ್ರು ಬಾಯಿ ಹಾಕೋದು ನಡತೆ ಅಲ್ಲ—ನಿಮಗೆ ಗೊತ್ತಿಲ್ವೇ ?

ಕಾಳಿ : ನೀನೇ ಮಾತಾಡ್ತಾ ನಿಂತುಬಿಟ್ರೆ, ನಾವು 'ಕಾ' ಅಂತ ಯಾವಾಗ ಬಾಯಿಬಿಡೋದು ?

ಜಂಬು : ತಿಳಿದೋರು ಎಂದಿಗೂ ಅತಿಯಾಗಿ ಮಾತಾಡಲ್ಲ: ಅಷ್ಟು ನಂಗೊತ್ತಿಲ್ವೇ ?

ಕಾಳಿ : ಹೇಳು, ಜಂಬು, ಹೇಳು ಮುಂದಕ್ಕೆ.

ಜಂಬು : (ತಲೆ ಕೆರೆದುಕೊಳ್ಳುತ್ತ) ನಾನು ಏನು ಹೇಳುತಿದ್ದೆ ? ಒಳ್ಳೆ ಉಪಾಯ ಮೊಗ್ಗು ಒಡೆದು, ಹೂವಾಗಿ, ಹಣ್ಣಾಗತಿತ್ತು—ಇಬ್ರೂ ಸೇರಿ ಚಿವುಟೇ ಹಾಕಿಬಿಟ್ರಿ.....ಬಿಡಿ. ಮುಖ್ಯ, ನಿಮ್ಮ ಮೊಟ್ಟೆಗಳು ಹಾವಿನ ಹಲ್ಲಿಗೆ ಸಿಕ್ಕಬಾರದು.

ಕಾಳಿ : ಅದು !

ಕಾಳಿ : ವಿಷದಂತನನ್ನು ಬಲಿ ಹಾಕಬೇಕು !

ಜಂಬು : ಆದರೆ ಹೊಟ್ಟೆ ತಾಳಹಾಕ್ತಾ ಇದ್ರೆ, ಒಂದೇ ಮನಸ್ಸಿಟ್ಟು ಯೋಚಿಸೋಕ್ಕೆ ಆಗತ್ತೆ ? ನೀವೇ ಹೇಳಿ. ಸತ್ತ ಜಿಂಕೇನ ಎರಡು ಕಿರುಬಗಳು ಕಿತ್ತಾಡೋ ಹಾಗೆ, ಹೊಟ್ಟೆ ಒಂದು ಕಡೆ ಎಳೆಯುತ್ತೆ, ತಲೆ ಇನ್ನೊಂದು ಕಡೆ ಎಳೆಯುತ್ತೆ.

Sri Vidyabharathi Book Centre, Sringeri

ಕಾಳಿ : ಯಾಕೆ, ಅಷ್ಟು ಹಸಿವೇ, ಜಂಬೂ ?

CC-O. In Public Domain. Digitized by eGangotri

ಜಂಬು : ಹಸಿವೇ ಅಂತ ಕೇಳ್ತೀಯಾ ? ಮೂರು ದಿನದಿಂದ ಉಪವಾಸ. ಬಿಡು, ನನ್ನ ಯೋಚನೆ ಬೇಡ—ನಂಗೆ ಅನ್ನ ಇಲ್ಲದೆ ಅಲೆಯೋದು ಅಭ್ಯಾಸ ಇದೆ.

ಕಾಳಿ : ಏನಾದರೂ ಚೊರುಗೀರು ಇಲ್ವೆ, ಕಾಳೀ ? ಮಾಂಸಾನೋ, ಮೂಳೇನೋ, ಎಲ್ಲಾದರೂ ಒಂದು ತುಂಡು ಮಿಕ್ಕಿರಬಹುದು ನೋಡು.

ಕಾಳಿ : (ಜಂಬು ಕುರಿತು) ತಿಂದಮೇಲೆ ಉಪಾಯ ಹೊಳೆಯುತ್ತೆ ಅನ್ನೋದು ಖಂಡಿತಾನೋ ?

ಜಂಬು : ನೋಡು, ಕಾಳೀ : ಸಾವು ಒಂದನ್ನು ಬಿಟ್ಟು ಎಲ್ಲಾ ಕಷ್ಟಕ್ಕೂ ಉಪಾಯ ಇದ್ದೇ ಇದೆ. (ಹೊರಟುಹೋಗುವಂತೆ ನಟಿಸುತ್ತ) ಹೋಕ್ಕೋಳ್ಳಿ ಬಿಡು ; ಹೋಗಿ, ಏನಾದರೂ ಎಲ್ಲಾದರೂ ಹುಡುಕಿ, ತಿಂದು, ಹೊಟ್ಟೆ ತುಂಬಿಸಿಕೊಂಡು, ನಿಧಾನವಾಗಿ ನಿಮ್ಮ ಕೆಲಸಕ್ಕೆ ಬರ್ತೀನಿ.

ಕಾಳಿ : (ಓಡಿಹೋಗಿ ಬಾಗಿಲಲ್ಲಿ ಅಡ್ಡನಿಂತು) ಬೇಡ, ಬೇಡಾ ! ಹೋಗಬೇಡ ! ನಾವು ನೀನು ಬರೋತಂಕ ಕಾಯಕ್ಕಾಗಲ್ಲ ! ವಿಷದಂತ ಮತ್ತೆ ಬಂದ್ರೆ ಏನು ಮಾಡೋದು ? ಅವನು ಬಂದೇ ಬರ್ತಾನೆ—ದಾರಿ ಕಂಡ ಕಳ್ಳೆ, ನಂಗೊತ್ತು ! (ಮೊಟ್ಟೆ ಬುಟ್ಟಿಯಿಂದ ಒಂದು ಚೂರು ತೆಗೆದು) ಇಗೋ, ಇದನ್ನ ತಗೊ. ತಿಂದು ಹೇಳು, ನಾವೇನು ಮಾಡಬೇಕು ಅಂತ.

ಜಂಬು : (ಆಸೆಯಿಂದ ಕಸಿದುಕೊಂಡು, ಬಕಬಕನೆ ಸಿಗಿದು ತಿನ್ನುತ್ತ) ಓ, ಕೊಡು ! ಈಗ ಹೇಳು, ನಾನು ತಿಂತಿರೋವಾಗ...(ಕುಟುಕ ಕಣ್ಣಿಗೆ ಬಿದ್ದೊಡನೆ) ಕುಟುಕ ! ಅದೇನು ಮಾಡ್ತಿದಾನೆ ಅವನಲ್ಲಿ ?

ಕಾಳಿ : ಪಾಪ !

ಕಾಳಿ : ಕುಟುಕ ಸತ್ತುಹೋಗಿದಾನೆ, ಜಂಬೂ ! ನಮ್ಮ ಗೊಡು ಕಾಯ್ತಿದ್ದ, ನಾವಿಲ್ಲದಿದ್ದಾಗ ವಿಷದಂತ ಬಂದಿರಬೇಕು, ಅವನ ಮೇಲೆ ಜಗಳ ಆಡಿರಬೇಕು—ನಾವು ಆಡಿದ ಹಾಗೆ. ವಿಷದಂತ ಕುಟುಕನನ್ನು ಕಚ್ಚಿ ಸಾಯಿಸಿಬಿಟ್ಟಿರಬೇಕು !

ಜಂಬು : ಕಚ್ಚೇಬಿಟ್ಟನೇ ? ಹಾಗೇ ? ಇರಲಿ : ವಿಷದಂತ ಅದಕ್ಕೆ ಶಿಕ್ಷೆ ಅನುಭವಿಸ್ತಾನೆ.

Sri Vidyabharathi Book Centre, Sringeri

ಕಾಳಿ : ಕಾಳ, ಕುಟುಕನನ್ನು ಒಳ್ಳೆ ಜಾಗದಲ್ಲಿ ಹೂಳಬೇಕು : ಪಾಪ ! ನಮ್ಮ ಗೋಸ್ಕರ ಪ್ರಾಣಬಿಟ್ಟಿದಾನೆ.

ಕಾಳ : (ಕುಟುಕನ ಹತ್ತಿರ ಹೋಗಿ) ಹೌದು. ಅಷ್ಟಾದರೂ ಮಾಡಬೇಕು ನಾವು.

ಜಂಬು : ಬಿಡು, ಕಾಳ : ನಾನು ಅದನ್ನು ನೋಡಿಕೋತೀನಿ. ನಾನೇ ತಗೊಂಡು ಹೋಗಿ ಕುಟುಕನನ್ನು ಒಳ್ಳೆ ಭರ್ಜರಿ ಸ್ಥಳದಲ್ಲಿ ಹೂಳ್ತೀನಿ —(ತನಗೆ ತಾನೆ, ಬೇರೆ ಕಡೆ ತಿರುಗಿಕೊಂಡು) ನನ್ನ ಹೊಟ್ಟೇಲಿ.

ಕಾಳ : (ಕೃತಜ್ಞತೆಯಿಂದ) ಅಷ್ಟು ಮಾಡ್ತೀಯಾ ? ಎಂಥಾ ಮಿತ್ರ ಜಂಬೂ !

ಜಂಬು : ಅಯ್ಯೋ, ಅದೇನು ದೊಡ್ಡ ವಿಚಾರ ? ಉಪಕಾರ (ತನಗೆ ತಾನೆ) ನನಗೆ ನಾನು...(ಗಟ್ಟಿಯಾಗಿ) ಮಾಡಬೇಕು ಅಂದ್ರೆ ನನಗೆ ತುಂಬಾ ಆಸೆ. ಎಷ್ಟೇ ಕಷ್ಟ ಆದರೂ ಅಂಥಾ ಸಮಯ ಬಿಡಲ್ಲ ನಾನು. (ಜೂರು ತಿಂದು ಮುಗಿಸಿ ಬಾಯಿ ಒರೆಸಿಕೊಳ್ಳುತ್ತ) ಈಗ ಒಂದು ಸಣ್ಣ ಉಪಾಯ ಮನಸ್ಸಿನಲ್ಲಿ ಚಿಗುರ್ತಾ ಇದೆ.

ಕಾಳಿ : ಸಣ್ಣ ಉಪಾಯ ? ಯಾಕೆ ಸಣ್ಣ ?

ಜಂಬು : ಸಣ್ಣ ತಿಂಡೀಗೆ ಸಣ್ಣ ಉಪಾಯ ; ದೊಡ್ಡದಕ್ಕೆ ದೊಡ್ಡದು.

ಕಾಳ : ಓ ? (ಕಾಳ ಕಡೆ ತಿರುಗಿ) ಏನು ಹೇಳ್ತಿ, ಕಾಳಿ ? ಇಕ್ಕಿದ್ದು ಮಿಕ್ಕಿದ್ದು ಏನಾದರೂ ಇದ್ರೆ ಜಂಬು ಹೊಟ್ಟೆ ತುಂಬಿಸೋಕ್ಕೆ ಕೊಡ್ತೀಯೋ ನೋಡು.

ಕಾಳಿ : ಆಂ ? ಮನೇಗೆ ಬಂದೋರಿಗೆ ಇಕ್ಕೋಮಿಕ್ಕಿದ್ದೆ ? ಜಂಬು ಅಂಥ ಮಿತ್ರನಿಗೆ ಎಂದೂ ನಾನು ಅವಮಾನ ಮಾಡಲ್ಲ !

ಜಂಬು : ಅಯ್ಯೊ, ಅದೇನು ಪರವಾಯಿಲ್ಲ, ಕಾಳಮ್ಮಾ. ನಾವೆಲ್ಲಾ ಒಂದೇ ಕಾಡಿನ ನೆಂಟರಲ್ವೇ ? "ಒಬ್ಬನ ಕಷ್ಟಕ್ಕೆ ಎಲ್ರೂ ಆಗಬೇಕು" — ಅದೇ ನಾ ಹೇಳೋದು.

ಕಾಳಿ : ಉಂಟೇ, ಉಂಟೇ ! ನಿನ್ನ ಸಣ್ಣ ಉಪಾಯಾನೇ ಒಳ್ಳೆ ತಂತ್ರವಾಗಿರತ್ತೆ, ನಂಗೊತ್ತು ; ಹೇಳು ಬೇಗ.

ಜಂಬು : ಹಾಗಾದರೆ ಹಾಗೇ ಆಗಲಿ, ಬಿಡು. ನಾವೀಗ ಈ ಕಂಟಕನನ್ನ, ಜಾಣ ನಳ್ಳಿ ಹೊಟ್ಟೆಬಾಕ ಕೊಕ್ಕೇನ ಕೊಂದುಹಾಕಿದ ಹಾಗೆ, ಕೊಂದು ಹಾಕಬೇಕಷ್ಟೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಳಿ : ಓ ! ಹಾಗೇ ? ನಳ್ಳಿ, ಅಷ್ಟು ಚಿಕ್ಕದು. ಆ ಬಕಾಸುರ ಕೊಕ್ಕರೇನ ಹೇಗೆ ಕೊಂದುಹಾಕಿತು ?

ಜಂಬು : ಅದೇನು, ಬಹಳ ಸುಲಭ—ಅಂಥಾದ್ದು ನಾನು ಎಷ್ಟೋ ಮಾಡಿದೀನಿ.

ಕಾಳಿ : ಅದೆ ! ನರಿ ಅಂದ್ರೆ ಉಪಾಯ ; ಉಪಾಯಾ ಅಂದ್ರೆ ನರಿ ! ಅಷ್ಟು ದೊಡ್ಡ ತಲೇಲಿ ಎಷ್ಟು ಉಪಾಯ ಮುಚ್ಚಿಟ್ಟಿದ್ದೀ, ಜಂಬೂ ?

ಕಾಳಿ : (ತಾಳ್ಮೆ ಕಳೆದುಕೊಂಡು) ಅದೆಲ್ಲಾ ಸರಿ. ಈಗ ನಾವೇನು ಮಾಡಬೇಕು, ಅದು ಹೇಳು.

ಜಂಬು : ಇನ್ನೇನಿಲ್ಲ, 'ಕುಸ್ತಿ ಮಾಡಿ ಗೆಲ್ಲಕ್ಕೆ ಆಗದಿರೋ ಹಗೇನ ಜಾಣತನದಿಂದ ಗೆಲ್ಲ' ಅಷ್ಟೆ.

ಕಾಳಿ : ಸರಿಯಪ್ಪ ; ನಿನ್ನ ವೇದಾಂತ ಮುಗಿಯೋದೇ ಇಲ್ಲ ! ನಿನ್ನ ಹೊಟ್ಟೆ ತುಂಬಿದರೂ ನಮ್ಮ ಹೊಟ್ಟೆ ಯೋಚನೇನೇ ಇಲ್ಲವಲ್ಲಾ !

ಕಾಳಿ : ಅದೇನು ನಿನ್ನ ಉಪಾಯ, ಬೇಗ ಹೇಳು, ಜಂಬೂ.

ಜಂಬು : (ಹೊರಡುತ್ತ) ಬಾ ನನ್ನ ಸಂಗಡ, ಹೇಳಿಕೊಡ್ತೀನಿ.

ಕಾಳಿ : (ಕುತೂಹಲದಿಂದ ಜಂಬುವನ್ನು ನೆಗೆದುಕೊಂಡು ಹಿಂಬಾಲಿಸುತ್ತ) ನಡಿ, ನಿನ್ನ ಹಿಂದೇನೆ ಬಂದೆ.

ಕಾಳಿ : ಕಿವಿಗೊಟ್ಟು ಕೇಳು, ಕಾಳಾ, ಜಂಬು ಹೇಳೋದನ್ನೆಲ್ಲಾ.

ಕಾಳಿ : ಕೇಳಿಕೊಂಡು ಬರ್ತೀನಿ. (ಹೊರಬೀಳುವುದು.)

ಕಾಳಿ : (ಬಾಗಿಲಿಗೆ ಹೋಗಿ ಕೂಗುತ್ತ) ಬೇಗ ಬಾ. ಎಲ್ಲೆಲ್ಲೋ ಅಲೆಯೋಕ್ಕೆ ಹೋಗಬೇಡ.

CC-O. In Public Domain. Digitized by eGangotri

ದೃಶ್ಯ ಮೂರು

(ಕಾಳ ಮತ್ತು ಕಾಳಿ ಇಬ್ಬರೂ ಕುತೂಹಲದಿಂದ ಗೂಡಿನ ಹೊರಗೆ ಕಾಯುತ್ತ ಕೂತಿವೆ. ಬೆಳಗಿನ ಬಿಸಿಲು ಪ್ರಕಾಶಿಸುತ್ತಿದೆ.)

ಕಾಳಿ : ರಾಣಿ ಇನ್ನೂ ಬರಲೇ ಇಲ್ಲ, ಎಷ್ಟು ಹೊತ್ತಾಯ್ತು ?

ಕಾಳ : ಇನ್ನೂ ಹೊತ್ತಾಗಿಲ್ಲ : ನಿನಗೆ ಅವಸರ ಅಷ್ಟೆ.

ಕಾಳಿ : ನನಗೆ ಅವಸರ ಅಲ್ಲ. ಬಿಸಿಲು ನಮ್ಮ ಮರದ ಬುಡ ತಗಲೋದೇ ತಡ, ದಿನಾ ಬರತಿದ್ಲು. ಈಗ ಆಗಲೇ ನೆರಳು ಮುಟ್ಟುತಾ ಇದೆ ನೋಡು.

ಕಾಳ : ಅಗೊ ! ಬಂದಳು !

ಕಾಳಿ : (ಹಾರಾಡುತ್ತ) ಕಾಳ, ಜಂಬು ಹೇಳಿಕೊಟ್ಟಿದ್ದನ್ನು ಮರೀಬೇಡಾ ! ಚಾಚೂ ತಪ್ಪದೆ ಹಾಗೇ ಮಾಡು !

ಕಾಳ : (ಕೆಳಧ್ವನಿಯಲ್ಲಿ) ಮಾಡ್ತೀನಿ ! ಮಾಡ್ತೀನಿ ! ನೀನು ನನ್ನ ಗಡಿಬಿಡಿ ಮಾಡಬೇಡ !

(ರಾಣಿ ಮತ್ತು ಅವಳ ಸೇವಕಿ ಪ್ರವೇಶಿಸುತ್ತಾರೆ. ಹಾವಿನ ಹುತ್ತ. ನಂತರ ಕಾಗೆ ಗೂಡಿನ ಮರದ ಪಕ್ಕದಲ್ಲೇ ನದಿ ಕಡೆಗೆ ನಡೆದು ಹೋಗುವರು. ತೀರದ ಮೆಟ್ಟಲುಗಳನ್ನು ತಲುಪಿ ನಿಲ್ಲುವರು.)

ರಾಣಿ : ಎಳೆಬಿಸಿಲು ಎಷ್ಟು ಮನೋಹರವಾಗಿದೆ !

ಸೇವಕಿ : ಔದು ಬುದ್ದಿಯೋರ. ನದೀಲಿ ಸಾನ ಈ ಪೊತ್ತಲ್ಲಿ ಬಲ್ ಚಂದ, ಬುದ್ಧಿಯೋರಾ. (ತಂದಿದ್ದ ಮಡಿಬಟ್ಟೆಗಳನ್ನು ಪತ್ತಿರದ ಬಂಡೆಯ ಮೇಲಿಟ್ಟು, ರಾಣಿಯ ಕತ್ತಿನಿಂದ ಮುತ್ತಿನ ಹಾರವನ್ನೂ ಮತ್ತು ಇನ್ನೂ ಕೆಲವು ಒಡವೆಗಳನ್ನೂ ತೆಗೆದು ಬಂಡೆಯ ಮೇಲೆ ಇಡುತ್ತಾಳೆ.) ನೀರೂ ಬೆಚ್ಚಗಿರತೈತೆ.

ರಾಣಿ : ಹೌದು, ನದಿ ಈ ಹೊತ್ತಲ್ಲಿ ಹಿತವಾಗಿರುತ್ತೆ. ನಮ್ಮ ಕುಮಾರಿಯವರೂ ಸ್ನಾನಕ್ಕೆ ಬರಬಹುದಾಗಿತ್ತು.

ಸೇವಕಿ : ಚಿಕ್ಕಬುದ್ದಿಯೋರ್ನ, ಬನ್ನಿ ಅವ್ವಾ ಅಂತ ಬೇಡಿಕೊಂಡೆ. ಆದರವರು "ಇನ್ನೊಂದಷ್ಟೊತ್ತು ಮನಗತೀನಿ, ಅಷ್ಟೊತ್ತಿಗೆ ನೀರು ಇನ್ನೂ ಬೆಚ್ಚಗಾಗತೈತೆ," ಅಂದು, ಪೊದ್ದಿಕೆ ಎಳಕೊಂಡು ಇನ್ನೂ ಒಳಗೆ ಮನಗೇಬಿಟ್ರು. (ಔದು ನಗುತ್ತಳೆ.)

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಣಿ : (ನಸುನಗುತ್ತ) ಚಿಕ್ಕಬುದ್ಧಿಯೋರದು ತುಂಬಾ ತಮಾಷೆ ಅಲ್ವೆ ?

ಸೇವಕಿ : ಬಲ್ ತಮಾಷಿಯೋರು, ಬಲ್ ತಮಾಷಿ ! ಅವರೆ ಮಾತು ಕೇಳ್‌ತಿದ್ರೆ ಪಕ್ಕೆ ಯಿಡ್‌ಕೊಂಡ್ ನಕ್ಕ್ ನಕ್ಕ್ ಸಾಕಾಗತದೆ. ಚಿಕ್ಕ್ ಬುದ್ಧಿಯೋರ್‌ಗಿಂತ ದೇಸ್‌ದಲ್ಲೀ ಇಲ್ಲ ಅಸ್ಯಗಾರ್ರು ಅಂತೀನ್ ನಾನು.

ರಾಣಿ : ಕುಮಾರಿಯವರು ಇನ್ನೂ ಎಳೆವಯಸ್ಸಿನವರು : ನಿದ್ದೆ ಮಾಡಲಿ ಬಿಡು. ಹೇಗಾದರೂ ಮುದಿಯಾದಮೇಲೆ—ನನ್ನ ಹಾಗೆ—ನಿದ್ದೆಮಾಡ ಬೇಕೂ ಅಂದ್ರೂ ನಿದ್ರೆ ಬರಲ್ಲ.

ಸೇವಕಿ : ಇಲ್ಲ, ಇಲ್ಲ, ದೊಡ್ಡಬುದ್ಧಿಯೋರಾ. ನಿಮಗೆಂತಾ ವಯಸ್ಸು ! ನೀವಿಬ್ಬರೂ ಜೋಡಿಯಾಗಿ ವೋಗ್‌ತಿದ್ರೆ, ಅಕ್ಕತಂಗಿಯೋರಂಗ್ ಕಾಣಸ್‌ತೀವ್ರಿ !

ಕಾಳಿ : (ಪಿಸುಮಾತಿನಲ್ಲಿ ಅವಸರಪಡಿಸುತ್ತ) ಕಾಳ, ಈಗ ! ಹೋಗು, ಹಾರಿಸಿ ಕೊಂಡು ಬಾ !

ಕಾಳ : (ಕಿಳಧ್ವನಿಯಲ್ಲಿ) ತಾಳು ! ಸ್ನಾನಕ್ಕೆ ಇಳಿದುಹೋಗ್ಲಿ ; ಆಮೇಲೆ.

ಸೇವಕಿ : ಆಯ್ತು, ಬುದ್ಧಿಯೋರಾ. ತಾವು ನೀರಿಗಿಳೀಬೋದು.

ರಾಣಿ : ಒಳ್ಳೇದು. (ಇಳಿದುಹೋಗಿ, ಕಣ್ಣಿಗೆ ಕಾಣಿಸುವುದಿಲ್ಲ.)

ಕಾಳಿ : ಈಗ ! ಹೋಗು !

(ರಾಣಿಯು ಸ್ನಾನಕ್ಕೆ ಹೋಗುತ್ತಿರುವುದನ್ನು ಸೇವಕಿ ನೋಡುತ್ತ ನಿಂತಿರುವಾಗ ಹಿಂದಿನಿಂದ ಕಾಳ ಒಡವೆಗಳಿಟ್ಟಿರುವ ಬಂಡಿಯ ಮೇಲೆ ಹಾರಿಬಂದು ಕೂರುವುದು. "ಕಾ ಕಾ ಕಾ" ಎಂದು ಕೂಗಿ ಮುತ್ತಿನ ಹಾರವೊಂದನ್ನು ಒಡವೆಗಳ ರಾಶಿಯಿಂದ ತೆಗೆದು ಕೊಕ್ಕಿನಲ್ಲಿ ಹಿಡಿದು ನಿಲ್ಲುವುದು. ಸೇವಕಿ ತನ್ನ ಕಡೆ ತಿರುಗುವುದಕ್ಕೇ ಕಾದಿದ್ದು, ಅವಳು ತನ್ನ ಚೇಷ್ಟೆಯನ್ನು ಕಂಡಳು ಎಂದು ತಿಳಿದ ಕ್ಷಣ, ಕುಪ್ಪಳಿಸುತ್ತ, ನೆಗೆಯುತ್ತ, ಹಾರುತ್ತ, ವಿಷದಂತನ ಹುತ್ತದ ಕಡೆ ಸೇವಕಿಯನ್ನು ಎಳೆದುಕೊಂಡು ಹೋಗುವುದು.)

ಸೇವಕಿ : (ಗಾಬರಿಪಡುತ್ತ, ಕಾಳನನ್ನು ಅಟ್ಟಿಸಿಕೊಂಡು ಹೋಗುತ್ತ) ಓ, ಕಳ್ಳಾ ! ಸಿಪಾಯಿಗೋಳೇ, ಕಳ್ಳಾ ! ಬನ್ನಿ ! ಓಡಿ ಬನ್ನಿ ! ಕಳ್ಳಾ ! ಕಳ್ಳಾ !

(ಇಬ್ಬರು ಸಿಪಾಯಿಗಳು ದೊಣ್ಣೆಗಳನ್ನು ಹಿಡಿದು ಓಡಿಬರುವರು.)

ಮೊದಲನೆಯ ಸಿಪಾಯಿ : ಏನಾಯ್ತಮ್ಮೀ ?! ಎಲ್ಲಮ್ಮೀ ಕಳ್ಳಾ ! ಎಲ್ಲಿ ?!

ಎರಡನೆಯ ಸಿಪಾಯಿ : ಎಲ್ಲೂ ಕಾಣಲ್ಲಲ್ಲಾ ?! ಎಲ್ಲಿಗೋಯ್ತೂರಾ ಅಯ್ತಾ ?!

CC-O. Vidyabharathi Book Centre, Sringeri

CC-O. In Public Domain. Digitized by eGangotri

ಸೇವಕಿ : ನೋಡಲ್ಲಿ ! ಅಲ್ಲಿ ನೋಡು ! ಆಳಾದ ಕಾಗೆ ರಾಣಿಯೋರ್ ಸರ ಪೊತ್ತ್‌ಕೊಂಡ್ ಪೋಗ್‌ತಿದೆ ! ಓಡಿ, ಇಡೀರಿ ! ಅಯ್ಯಯ್ಯೋ, ಆರ್ ಪೋಯ್ತು ! ಕಳದೋದ್ರೆ ನನ್ ತಲೆ ಪೋಯ್‌ತೈತೆ ! ಅಯ್ಯೋ ನಮ್ಮಪ್ಪಾ !

(ಕಾಳ, ಅವರೆಲ್ಲ ಕಾಣುವಂತೆ, ಹುತ್ತದ ಬಾಯಲ್ಲಿ ಮುತ್ತಿನ ಹಾರವನ್ನು ಹಾಕಿ ಬಿಟ್ಟು ಹಾರಿಹೋಗಿ ಕೊಂಬೆಯ ಮೇಲೆ ಕಾಳಿಯ ಪಕ್ಕದಲ್ಲಿ ಕೂಡುವುದು. ರಾಣಿಯ ಹಾರವನ್ನು ಕಾಳ ಕವಿಯುತ್ತಿದ್ದಾಗ, ಕಾಳಿಯು "ಕಾ ಕಾ ಕಾ" ಎಂದು ಕೂಗಾಡುತ್ತ, ಅಲ್ಲಿಂದಿಲ್ಲಿಗೆ ರೆಕ್ಕೆಗಳನ್ನು ಬಡಿಯುತ್ತ, ಗಲಾಟೆ ಎಬ್ಬಿಸುತ್ತಿದ್ದು. ಈಗ ಎರಡೂ ಹುತ್ತದ ಕಡೆ ಕಣ್ಣಲ್ಲಿ ಕಣ್ಣಿಟ್ಟು ಕಾತುರರಾಗಿ ನೋಡುತ್ತಿವೆ.)

ಎರಡನೆಯ ಸಿಪಾಯಿ : (ಹುತ್ತವನ್ನು ದೊಣ್ಣೆಯಿಂದ ಒಡೆದುಹಾಕುತ್ತ) ಬಾಣ್ಣಾ, ಇದ ಕೆಡವ್ಲೋಣಾ !

(ಸ್ವಲ್ಪದರಲ್ಲೇ ಹುತ್ತದ ಬಾಯಿಂದ ವಿಷದಂತ ಬುಸುಗುಟ್ಟುತ್ತ ಹೆಡೆ ಕಾಣಿಸಿ ಕೊಳ್ಳುವುದು.)

ಮೊದಲನೆಯ ಸಿಪಾಯಿ : ಅಯ್ಯಪ್ಪೊ ! ನಾಗರಾವು ! ಕಾಳಿಂಗ ! ಉಸಾರು !

ಸೇವಕಿ : ಅಯ್ಯಯ್ಯೋ ! ಇನ್ನೇನು ಗತೀ ? ನಮ್ಮಪ್ಪಾ !

ಎರಡನೆಯ ಸಿಪಾಯಿ : ಇಕ್ಕು ಒಂದ ಎಡೆ ಮೇಲೆ !

(ಇಬ್ಬರೂ ಸೇರಿ ವಿಷದಂತನನ್ನು ಬಡಿದುಹಾಕುವರು.)

ಕಾಳಿ, ಕಾಳ : (ಏಟಿಗೊಂದು ಕೂಗುಹಾಕುತ್ತ) ಹಾಗೆ ! ಅದು ! ಇನ್ನೊಂದು ! ಮೊಟ್ಟೇಗೊಂದು ತಿನ್ನು ! ಕೊಲೆಗಾರ ! ಕೊಸರಿಗೆ ಮತ್ತೊಂದು ! ಹಾಗೆ ! ಕೊಂದ್‌ಹಾಕಿ ಕೊಲೆಗಾರನ್ನ !

ಮೊದಲನೆಯ ಸಿಪಾಯಿ : (ಮುತ್ತಿನ ಹಾರವನ್ನು ಹುತ್ತದಿಂದ ಎತ್ತಿ, ದೊಣ್ಣೆಯ ತುದಿಯಲ್ಲಿ ಸಿಕ್ಕಿಸಿಕೊಂಡು ತಂದು ಸೇವಕಿಗೆ ಕೊಡುತ್ತ) ಇಗೋ, ರಾಣೇವಾಸದ ಆರ, ತಗೋಳಮ್ಮೀ.

ಸೇವಕಿ : (ಕೃತಜ್ಞತೆಯಿಂದ ತೆಗೆದುಕೊಂಡು, ಕಣ್ಣೀರನ್ನು ಒರೆಸಿಕೊಳ್ಳುತ್ತ) ನಮ್ಮಪ್ಪಾ, ನಂ ಜೀವ ಉಳಿಸಿದ್ರಿ ! ನಿಮ್ಕೊಟ್ಟೆ ತಣ್ಣಗಿರ್ಲಿ !

ಎರಡನೆಯ ಸಿಪಾಯಿ : (ಸತ್ತ ಹಾವನ್ನು ಎಳೆದುಕೊಂಡು ಹೊರಗೆ ಹೋಗುತ್ತ) ನಮ್ಮ ನಸೀಬು ಚೆನ್ನಾಗಿತ್ತು, ಅಂತ ಕಾಣ್ತೆ. ಅಷ್ಟರಲ್ಲೇ ಆಕ್ಕು

Sri Vidyabharathi Book Centre, Sringeri

 CC-O. In Public Domain. Digitized by eGangotri

ಸೇವಕಿ : ಅಲ್ವಾ ? ಪೊಂದಿನ ಅಲ್ಲ ಪೊಂದಿನ, ದೊಡ್ಡ ಬುದ್ದಿಯೋರ್ನೋ ಚಿಕ್ಕ ಬುದ್ದಿಯೋರ್ನೋ ಕಚ್ಚಿ ಬಿಡತಿತ್ತು ಆವು !

ಎರಡನೆಯ ಸಿಪಾಯಿ : ಅವರನ್ನಲ್ಲದಿದ್ರೆ ನಮ್ಮನ್ನ ! (ಹೊರಬೀಳುತ್ತ) ಆಮೇಲೆ ನಮ್ಮ ಯೆಡ್ತಿ ಮಕ್ಕಳ್ ತಲೇ ಮೇಲೆ ಕಲ್ಲು !

ಸೇವಕಿ : ದೊಡ್ಡ ಬುದ್ಧಿಯೋರಿಗೋಗಿ ಎಲ್ಲಾ ಆರಿಕೆ ಮಾಡ್ತೀನಿ. (ಹೋಗುವಳು.)

ಮೊದಲನೆಯ ಸಿಪಾಯಿ : ನಮಗೆ ಇನಾಮು ಮರೀಬ್ಯಾಡ ಕಣಮ್ಮೀ.

(ಎರಡನೆಯವನ ಹಿಂದೆ ಹೊರಟುಹೋಗುವನು.)

ಸೇವಕಿ : (ಮರೆಯಾಗುತ್ತ) ಇಲ್ಲ, ಇಲ್ಲ. ಒಳ್ಳೆ ಇನಾಮು ಕೊಡಿಸ್ತೀನಿ.

(ಅವರೆಲ್ಲರೂ ಕಣ್ಮರೆಯಾದ ಕೂಡಲೇ ಎರಡು ಕಾಗೆಗಳೂ ಹಾರಿ ಕೆಳಗಿಳಿದು ಹಾಡಿ ಕುಣಿದಾಡುವುವು.)

ಕಾಳಿ : ಮಿತ್ರಾ, ಜಂಬೂ, ನಿನಗೆ ವಂದನೇ ;
ದಂತಾ ಸತ್ತಾ, ಪೀಡೆ ಓಡಿತೂ !
ಲಲ ಲಲಾ ; ಲಲ ಲಲಾ !

ಕಾಳಿ : ಮಿತ್ರಾ, ಜಂಬೂ, ನಿನಗೆ ವಂದನೇ :
ತತ್ತಿ ಎಲ್ಲಾ ಬದುಕಿ ಬರುವುವೂ !
ಲಲ ಲಲಾ ; ಲಲ ಲಲಾ !

ಎರಡೂ : ಜಂಬೂ, ಮಿತ್ರಾ, ನಿನಗೆ ವಂದನೇ ;
ಲೋಕಕೆಲ್ಲಾ ಶಾಂತಿಯಾಯಿತೂ !
ಲಲ ಲಲಾ ; ಲಲ ಲಲಾ !

CC-O. In Public Domain. Digitized by eGangotri

ಇಂದುಮುಂದಿನ ಕಾಲಗಳು ದಿನೇದಿನೇ ಹೆಚ್ಚುಹೆಚ್ಚಾಗಿ ವಿಜ್ಞಾನಯುಗವಾಗುತ್ತಾ ಬರುತ್ತಿವೆ. ವನ್ಯಪ್ರಾಣಿಗಳು ತುಂಬಿ, ಮನೋಹರವಾಗಿ ಮಾನವಜೀವನವನ್ನು ಅನುಕರಿಸಿ ನಾಟಕವಾಡಿ ತೋರಿಸುವ ವಿಷ್ಣುಶರ್ಮನ ಕಥಾಸರಣಿಯಲ್ಲಿ ಪ್ರಾಣಿಸಂಬಂಧ ವಿಜ್ಞಾನವಿಚಾರಗಳನ್ನು ಮುಕ್ಕಳಿಗೆ (ಏಕೆ, ವಯಸ್ಕರಿಗೂ) ಸ್ವಾರಸ್ಯವಾಗಿ ತಿಳಿಸಿ, ಪ್ರಾಣಿಶಾಸ್ತ್ರದಲ್ಲೇ ಕುತೂಹಲವನ್ನು ಕೆರಳಿಸುವ ಅವಕಾಶಗಳು ಎಷ್ಟಿವೆ!

ಇದನ್ನು ಕಂಡು ಮೊಟ್ಟಮೊದಲು ಇಂಗ್ಲಿಷಿನಲ್ಲಿ ಈ ಹೊಸ ಕಾರ್ಯವನ್ನು ಕೈಕೊಂಡೆ. ಕೆಲವು 'ಹೊಸ ರೂಪ'ದ ಕಥೆಗಳು *Bhavan's Journal*ನಲ್ಲಿ ಬಿಡಿಬಿಡಿಯಾಗಿಯೂ, ನಂತರ Macmillans (India)ರವರಿಂದ ಒಂದು ಗುಚ್ಛವಾಗಿಯೂ ಪ್ರಕಟವಾದುವು. ಈ ಕಥೆಗಳಲ್ಲಿ ಸಮಯಾನುಸಾರ ಜಂತುಗಳ ದೇಹರಚನೆ, ಒಳಾಂಗಗಳ ಕ್ರಿಯಾರೀತಿ, ಆಯಾ ಪ್ರಾಣಿಗಳ ಸ್ವಭಾವ, ಪರಸ್ಪರ ವ್ಯತ್ಯಾಸ, ವೈಶಿಷ್ಟ್ಯಗಳನ್ನು ಮುಕ್ಕಳಿಗೆ ಆಕರ್ಷಣೀಯವಾಗಿ ಚಿತ್ರಿಸಲು ಯತ್ನಿಸಿದ್ದೇನೆ.

ನಾಟಕೀಯವಾಗಿರುವ ಕೆಲವು 'ಹಿತೋಪದೇಶ'ದ ಕಥೆಗಳನ್ನು ಮುಕ್ಕಳ ರಂಗಕ್ಕೆ ಅಳವಡಿಸಿದ್ದೇನೆ. ಈಗ ಕೆಲವು ಕಥೆಗಳನ್ನೂ ಒಂದು ಮುಕ್ಕಳ ನಾಟಕವನ್ನೂ 'ಹೊಸ ರೂಪದ ಹಿತೋಪದೇಶ' ಎಂಬ ಮಾಲೆಯಲ್ಲಿ ಗೀತಾ ಬುಕ್ ಹೌಸ್ ಪ್ರಕಾಶಕರು ಕನ್ನಡದಲ್ಲಿ ಪ್ರಕಟಿಸುತ್ತಿದ್ದಾರೆ. ವಿಜ್ಞಾನದ ಚಿಮಿಕಿ ಅಂಗಿ ತೊಟ್ಟಿರುವ ಈ ಸರಣಿ ಮೂಲ ಇಂಗ್ಲಿಷ್ ಸರಣಿಯಂತೆ ಜನಪ್ರಿಯವಾದರೆ, ಈ ಕಾರ್ಯದಲ್ಲಿ ಭಾಗವಹಿಸಿರುವ ನಮಗೆಲ್ಲಾ ಸಂತೋಷ, ತೃಪ್ತಿ.

ಕೆ. ಎಸ್. ರಂಗಪ್ಪ

ಮೈಸೂರು
ಫೆಬ್ರುವರಿ 29, 1984

Sri Vidyabharathi Book Centre, Sringeri

CC-O. In Public Domain. Digitized by eGangotri

ಮಕ್ಕಳ ಸಾಹಿತ್ಯ

'ನೀತಿಕಥಾಭಂಡಾರ' (ಸಚಿತ್ರ)—ಎ. ಎನ್. ಭಟ್

(1) ಹೊಲದಲ್ಲಿ ಬತ್ತಿದ ಹಣ ಮತ್ತು ಇತರ ಕಥೆಗಳು . 3 00
(2) ಪಾರಿವಾಳದ ಪಂಚಶೀಲ ಮತ್ತು ಇತರ ಕಥೆಗಳು . 3 00
(3) ಬಲವೋ, ಬುದ್ಧಿಯೋ? ಮತ್ತು ಇತರ ಕಥೆಗಳು . 3 00
(4) ಕೋಳಿ-ನಾಯಿ ಜಗಳ ಮತ್ತು ಇತರ ಕಥೆಗಳು . 3 00
(5) ಹದ್ದು-ಕರಡಿಯ ನ್ಯಾಯಸಂಧಾನ ಮತ್ತು ಇತರ ಕಥೆಗಳು 3 00

ಹೊಸ ರೂಪದ 'ಹಿತೋಪದೇಶ'—ಕೆ. ಎಸ್. ರಂಗಪ್ಪ

(1) ಕಥೆಗಳ ಕಥೆ ಮತ್ತು ಕುಜೇಷ್ಟೆಯ ಕೋತಿ . . 3 00
(2) ಠಕ್ಕನಿಗೆ ಪೂಜೆ 3 00
(3) ದಿಟ್ಟ ಮೊಲ 3 00
(4) ಕೊಲೆಗಾರನ ಕೊಲೆ (ಮಕ್ಕಳ ನಾಟಕ) . . . 3 00

ಪುಟ್ಟಣ್ಣ ಹೇಳಿದ ಕಥೆಗಳು—'ನೀತಿಚಿಂತಾಮಣಿ' ಖ್ಯಾತಿಯ ಎಂ. ಎಸ್. ಪುಟ್ಟಣ್ಣ (ಸಚಿತ್ರ)

(1) ಹಕ್ಕಿಯ ಬುದ್ಧಿ ಮತ್ತು ಇತರ ಐದು ಕಥೆಗಳು . 2 00
(2) ಹಸು ಮತ್ತು ಹೆಗ್ಗಣ ಮತ್ತು ಇತರ ಏಳು ಕಥೆಗಳು 2 00
(3) ನ್ಯಾಯಾಧಿಪತಿಯ ಯುಕ್ತಿ ಮತ್ತು ಇತರ ಏಳು ಕಥೆಗಳು 2 00

ಬ್ರಹ್ಮಾಂಡ ನೋಡು, ವಿಜ್ಞಾನ ಕಲಿ (ಸಚಿತ್ರ)
—ಸಿ. ಕೆ. ವೆಂಕಟನರಸಿಂಹಯ್ಯ (ಭಾರತ ಸರ್ಕಾರದಿಂದ ಬಹುಮಾನಿತ ಕೃತಿ) 6 00

ನಿರ್ಮಲ ಭಾರತೀ ಅಥವಾ ಮಕ್ಕಳ ಮಹಾಭಾರತ (ಸಚಿತ್ರ)
—ಎ. ಆರ್. ಕೃಷ್ಣಶಾಸ್ತ್ರೀ 5 00

Sri Vidyabharathi Book Centre, Sringeri

ಗೀತಾ ಬುಕ್ ಹೌಸ್ : ಪ್ರಕಾಶಕರು : ಮೈಸೂರು